# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಏಪ್ರಿಲ್ 05, 2021

ಸಂಪುಟ : 47 ಸಂಚಿಕೆ : 336 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




# ನ್ಯಾಯ ಸಮ್ಮತ ಬೇಡಿಕೆ ಈಡೇರಿಸಲು ಬದ್ಧ: ಸಿಎಂ

## ಬೆಳ್ಳೂಡಿ ಶಾಖಾ ಮಠದಲ್ಲಿ ವಿವಿಧ ಕಟ್ಟಡ ಉದ್ಘಾಟಿಸಿದ ಯಡಿಯೂರಪ್ಪ ಹೇಳಿಕೆ

ಜಿಗಳಿ ಪ್ರಕಾಶ್

ಮಲೇಬೆನ್ನೂರು, ಏ.4- ರಾಜ್ಯದಲ್ಲಿ ಮೀಸಲಾತಿ ಪ್ರಮಾಣ ಶೇ. 50 ಕ್ಕಿಂತ ಹೆಚ್ಚು ಮಾಡಲು ಸುಪ್ರೀಂ ಕೋರ್ಟಿಗೆ ಅಫಿಡವಿಟ್ ಸಲ್ಲಿಸಿ, ನಮ್ಮ ವಾದವನ್ನೂ ಮಂಡಿಸಿದ್ದೇವೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಭಾನುವಾರ ಕಾಗಿನೆಲೆ ಕನಕ ಗುರುಪೀಠದ ಬೆಳ್ಳೂಡಿ ಶಾಖಾ ಮಠದಲ್ಲಿ ನೂತನವಾಗಿ ನಿರ್ಮಿಸಿರುವ ವಿದ್ಯಾರ್ಥಿ ನಿಲಯ, ಸಮುದಾಯ ಭವನ ಹಾಗೂ ಮುಖ್ಯ ಮಹಾದ್ವಾರ ಉದ್ಘಾಟನೆ ಮತ್ತು ಶಾಖಾಮಠದ 5ನೇ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸುಪ್ರೀಂ ಕೋರ್ಟ್‌ನಲ್ಲಿರುವ ನಮ್ಮ ಅರ್ಜಿಯ ವಿಚಾರಣೆ ನಡೆದ ನಂತರ, ಮೀಸಲಾತಿ ಪ್ರಮಾಣ ಹೆಚ್ಚಿಸುವ ಬಗ್ಗೆ ನೋಡಿಕೊಂಡು

**ಹೊಸದುರ್ಗ ಶಾಖಾಮಠದಲ್ಲಿ ನಿರ್ಮಿಸುತ್ತಿರುವ ಕನಕದಾಸರ ಏಕಶಿಲಾ ಮೂರ್ತಿ ನಿರ್ಮಾಣಕ್ಕೆ 5 ಕೋಟಿ ರೂ. ಅನುದಾನ.**

**- ಯಡಿಯೂರಪ್ಪ ಭರವಸೆ**

**ಕುರುಬರನ್ನು ಎಸ್ಟಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಿ.**

**-ಸಿಎಂಗೆ ಕಾಗಿನೆಲೆ ಶ್ರೀ ಮನವಿ**

ಸರ್ಕಾರ ಮುಂದಿನ ಹೆಜ್ಜೆ ಇಡಲಿದೆ. ಕಾನೂನಾತ್ಮಕವಾಗಿ ಮತ್ತು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ನ್ಯಾಯ ಸಮ್ಮತವಾದ ಬೇಡಿಕೆಗಳಿಗೆ ನ್ಯಾಯ ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ಹಾಲುಮತ ಸಮಾಜವನ್ನು ಎಸ್‌ಟಿ ಮೀಸಲಾತಿಗೆ ಪರಿಗಣಿಸಲು ಕುಲಶಾಸ್ತ್ರೀಯ ಅಧ್ಯಯನ ನಡೆಯುತ್ತಿದೆ. ಶ್ರೀ ನಿರಂಜನಾನಂದಪುರಿ ಶ್ರೀಗಳು ಪ್ರಸ್ತಾಪಿಸಿದಂತೆ ಮೀಸಲಾತಿ ವಿಚಾರವಾಗಿ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಉನ್ನತ ಸಮಿತಿ ರಚಿಸಿದ್ದೇವೆ ಎಂದು ಹೇಳಿದರು.

ಹೊಸದುರ್ಗ ಶಾಖಾಮಠದಲ್ಲಿ ನಿರ್ಮಿಸುತ್ತಿರುವ ಭಾರತದಲ್ಲೇ ಅತಿ ದೊಡ್ಡದಾದ ಕನಕದಾಸರ ಏಕಶಿಲಾ ಮೂರ್ತಿ ಕಾಮಗಾರಿಗೆ ಸರ್ಕಾರದಿಂದ 5 ಕೋಟಿ ರೂ. ಅನುದಾನವನ್ನು ಕೂಡಲೇ ಬಿಡುಗಡೆ ಮಾಡುತ್ತೇನೆ. ಸಂಗೊಳ್ಳಿ ರಾಯಣ್ಣ ಕ್ಷೇತ್ರದ ಅಭಿವೃದ್ಧಿ ಯೋಜನೆಗಳಿಗೆ ಅವಶ್ಯವಿರುವ 30 ಕೋಟಿ ರೂ. ಅನುದಾನವನ್ನು ಪ್ರಾಧಿಕಾರಕ್ಕೆ ಬಿಡುಗಡೆ ಮಾಡುವ ಬಗ್ಗೆ ಗಮನಹರಿಸುತ್ತೇನೆ ಎಂದು ಹೇಳಿದರು.

ಕನಕದಾಸರು ತಮ್ಮ ನಿಷ್ಕಲ್ಮಶ ಭಕ್ತಿ ಮೂಲಕ ದೇವರನ್ನು ಮತ್ತು ದಾಸ (2ನೇ ಪುಟಕ್ಕೆ)

### ಪರಸ್ಪರ ಮಾತನಾಡದ ಸಿಎಂ-ಈಶ್ವರಪ್ಪ

ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವ ಈಶ್ವರಪ್ಪ ಇಬ್ಬರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ಜೊತೆಗೆ ಹೆಜ್ಜೆ ಹಾಕಿದರೂ ಪರಸ್ಪರ ಮಾತನಾಡದಿರಲಿ, ಒಬ್ಬರನ್ನೊಬ್ಬರು ಮುಖವನ್ನೂ ನೋಡಿಕೊಳ್ಳಲಿಲ್ಲ. ಮೊದಲೇ ಮಠಕ್ಕೆ ಆಗಮಿಸಿದ್ದ ಈಶ್ವರಪ್ಪ ಅವರು ಸಿಎಂ ಬಂದಾಗ ಅವರನ್ನು ಸ್ವಾಗತಿಸಲೂ ಸಹ ಹೋಗಲಿಲ್ಲ.

### ಪತ್ರ ವಿಚಾರಕ್ಕೆ ಪ್ರತಿಕ್ರಿಯೆ ನೀಡದ ಸಿಎಂ

ಸಚಿವ ಕೆ.ಎಸ್. ಈಶ್ವರಪ್ಪ ಅವರ ಪತ್ರದ ವಿಚಾರ ಹಾಗೂ ಸಿಡಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂ ಯಾವುದೇ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಆದರೆ ರಾಜ್ಯದಲ್ಲಿ ನಡೆಯುವ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪಚುನಾವಣೆ ಮತ್ತು ಮಸ್ಕಿ, ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ದಾಖಲೆ ಮತಗಳ ಅಂತರದಿಂದ ಗೆಲ್ಲುವ ವಿಶ್ವಾಸವಿದೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಯಡಿಯೂರಪ್ಪ ಉತ್ತರಿಸಿದರು.

# ಮಹಾರಾಷ್ಟ್ರದಲ್ಲಿ ವಾರಾಂತ್ಯದ ಲಾಕ್

### ಇಡೀ ವಾರ ರಾತ್ರಿ ಕರ್ಫ್ಯೂ ಬೆಳಿಗ್ಗೆ 144ನೇ ಸೆಕ್ಷನ್ ಜಾರಿ

ಮುಂಬೈ, ಏ. 4 - ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕುಗಳು ತೀವ್ರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಕಠಿಣ ವಾರಾಂತ್ಯದ ಲಾಕ್‌ಡೌನ್ ವಿಧಿಸಲಾಗಿದೆ. ಶುಕ್ರವಾರ ರಾತ್ರಿ 8ರಿಂದ ಸೋಮವಾರ ಬೆಳಿಗ್ಗೆ 7 ಗಂಟೆಯ ವರೆಗೆ ಕರ್ಫ್ಯೂ ಜಾರಿಯಲ್ಲಿರಲಿದೆ.

ವಾರಾಂತ್ಯದ ಲಾಕ್‌ಡೌನ್ ಜೊತೆಗೆ ಸೋಮವಾರದಿಂದ ಕಠಿಣ ನಿಯಮಗಳು ಜಾರಿಗೆ ಬರಲಿವೆ. ವಾರದ ದಿನಗಳಲ್ಲಿ ರಾತ್ರಿ ಕರ್ಫ್ಯೂ ಜಾರಿಯಲ್ಲಿದ್ದರೆ, ಬೆಳಿಗ್ಗೆ 144ನೇ ಸೆಕ್ಷನ್ ಜಾರಿಯಲ್ಲಿರಲಿದೆ ಎಂದು ಸಚಿವ ನವಾಬ್ ಮಲಿಕ್ ಸಂಪುಟ ಸಭೆಯ ನಂತರ ತಿಳಿಸಿದ್ದಾರೆ.

ಬಾರ್ - ರೆಸ್ಟೋರೆಂಟ್, ಮಾಲ್ ಹಾಗೂ ಅಂಗಡಿಗಳಲ್ಲಿ ಪಾರ್ಸಲ್‌ಗಳಿಗೆ ಮಾತ್ರ ಅವಕಾಶ ಇರಲಿದೆ. ಸರ್ಕಾರಿ ಕಚೇರಿಗಳು ಶೇ.50ರಷ್ಟು ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸಲಿವೆ ಎಂದು ಸಚಿವರು ಹೇಳಿದ್ದಾರೆ.

ಕೈಗಾರಿಕೆ, ಉತ್ಪಾದನಾ ವಲಯಗಳು, ತರಕಾರಿ ಮಾರುಕಟ್ಟೆಗಳು ಮಾರ್ಗಸೂಚಿಗಳ ಅನ್ವಯ ಕಾರ್ಯ ನಿರ್ವಹಿಸಲಿವೆ. ಸಿನೆಮಾ ಹಾಗೂ ನಾಟಕ ಮಂದಿರಗಳು ಬಂದ್ ಆಗಿರಲಿವೆ. ಪಾರ್ಕ್ ಹಾಗೂ ಮೈದಾನಗಳೂ ಸಹ ಮುಚ್ಚಿರಲಿವೆ. ಅಗತ್ಯ ಸೇವೆಗಳಿಗೆ ರಾತ್ರಿ ಕರ್ಫ್ಯೂದಿಂದ ವಿನಾಯಿತಿ ನೀಡಲಾಗಿದೆ.

**ಹೆಚ್ಚಿದ ಸೋಂಕು :** ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ತೀವ್ರ ಉಲ್ಬಣಿಸುತ್ತಿದ್ದು, ಭಾನುವಾರ ಒಂದೇ ದಿನ 57,074 ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 222 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ಕಳೆದ ಎರಡು ವಾರಗಳಲ್ಲಿ ರಾಜ್ಯದಲ್ಲಿ 4.26 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ. ನಂತರದ ಸ್ಥಾನದಲ್ಲಿರುವ ಪಂಜಾಬ್‌ನಲ್ಲಿ 35,754 ಸೋಂಕಿತರು ಕಂಡು ಬಂದಿದ್ದಾರೆ.


**ಆಕ್ಸಿಜನ್ ಸಿಲಿಂಡರ್ ಬೇಡಿಕೆ :** ರಾಜ್ಯದ ಔರಂಗಾಬಾದ್ ಜಿಲ್ಲೆಯಲ್ಲಿ ಆಕ್ಸಿಜನ್ ಸಿಲಿಂಡರ್‌ಗಳ ಬೇಡಿಕೆ ಮೂರು ಪಟ್ಟು ಹೆಚ್ಚಾಗಿದೆ. ಜಿಲ್ಲೆಯಲ್ಲಿ 15,341 ಸಕ್ರಿಯ ಪ್ರಕರಣಗಳಿವೆ.

ಮಾರ್ಚ್ 14ರಂದು ಜಿಲ್ಲೆಯಲ್ಲಿ ಪ್ರತಿದಿನಕ್ಕೆ 17.10 ಟನ್ ಸಿಲಿಂಡರ್ ಬೇಡಿಕೆ ಇತ್ತು. ಅದು ಈಗ 49.50 ಟನ್‌ಗಳಿಗೆ ತಲುಪಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

**ಇಬ್ಬರಿಗೆ ಒಂದು ಬೆಡ್ :** ನಾಗಪುರದ ಜಿ.ಎಂ.ಸಿ. ಆಸ್ಪತ್ರೆಯಲ್ಲಿ ಇಬ್ಬರಿಗಿಂತ ಹೆಚ್ಚು ಕೊರೊನಾ ರೋಗಿಗಳಿಗೆ ಒಂದೇ (2ನೇ ಪುಟಕ್ಕೆ)

# ಜಿಮ್‌ಗಳಿಗೆ ವಿನಾಯಿತಿ

ಬೆಂಗಳೂರು, ಮಾ. 4 - ರಾಜ್ಯದಲ್ಲಿ ಕೋವಿಡ್ ಸೋಂಕು ನಿಯಂತ್ರಣ ಉದ್ದೇಶದಿಂದ ವ್ಯಾಯಾಮ ಶಾಲೆ - ಜಿಮ್ ಗಳನ್ನು ಬಂದ್ ಮಾಡಿದ್ದ ರಾಜ್ಯ ಸರ್ಕಾರ ಇದೀಗ ತನ್ನ ಆದೇಶವನ್ನು ಮಾರ್ಪಡಿಸಿದೆ. ಶೇ. 50 ರಷ್ಟು ಸಾಮರ್ಥ್ಯದೊಂದಿಗೆ ಜಿಮ್‌ಗಳ ಕಾರ್ಯನಿರ್ವಹಣೆಗೆ ಅನುಮತಿ ನೀಡಿದೆ.



**ಸಿನೆಮಾ ಬೆನ್ನಲ್ಲೇ ಜಿಮ್‌ಗಳಿಗೂ ಅನುಮತಿ ನೀಡಿದ ಸರ್ಕಾರ**

ನಿನ್ನೆ ಶನಿವಾರವಷ್ಟೇ ಚಿತ್ರರಂಗದ ಹಲವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭೇಟಿ ಮಾಡಿದ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹೌಸ್‌ಫುಲ್ ಮೂಲಕ ಚಿತ್ರ ಪ್ರದರ್ಶನಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದ್ದನ್ನು ಸ್ಮರಿಸಬಹುದಾಗಿದೆ.

ಜಿಮ್ ಮಾಲೀಕರ ಸಂಘದ ಮಾಲೀಕರ ಮನವಿಗೆ ಸ್ಪಂದಿಸಿರುವ ರಾಜ್ಯ ಸರ್ಕಾರ, ಸಿನಿಮಾ ಮಂದಿರಗಳ ಮಾದರಿಯಲ್ಲಿ ಜಿಮ್‌ಗಳಿಗೂ ಅವಕಾಶ ಕಲ್ಪಿಸಿದೆ. ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಮುಖ್ಯ ಕಾರ್ಯದರ್ಶಿ ಪಿ. ರವಿ ಕುಮಾರ್ ಈ ಕುರಿತು ಆದೇಶ ಹೊರಡಿಸಿದ್ದಾರೆ.

ಜಿಮ್‌ಗಳಲ್ಲಿ ಶೇ.50ಕ್ಕಿಂತ ಹೆಚ್ಚು ಸಾಮರ್ಥ್ಯವಿಲ್ಲದಂತೆ ನೋಡಿಕೊಳ್ಳಬೇಕು, ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು ಹಾಗೂ ಮಾಸ್ಕ್ ಧರಿಸುವ ಜತೆಗೆ ಸೋಂಕು ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಆದೇಶದಲ್ಲಿ (2ನೇ ಪುಟಕ್ಕೆ)

# ಭದ್ರತಾ ಸಿಬ್ಬಂದಿ ಮೇಲೆ 400 ಮಾವೋಗಳ ದಾಳಿ

ನವದೆಹಲಿ/ರಾಯಪುರ, ಏ. 4 - ಕನಿಷ್ಠ 22 ಭದ್ರತಾ ಸಿಬ್ಬಂದಿ ಸಾವಿಗೆ ಹಾಗೂ 30 ಇತರರು ಗಾಯಗೊಳ್ಳಲು 400ಕ್ಕೂ ಹೆಚ್ಚು ಮಾವೋಗಳ ಗುಂಪು ದಾಳಿ ನಡೆಸಿದ್ದೇ ಕಾರಣ ಎಂದು ಅಧಿಕೃತ ಮೂಲಗಳು ತಿಳಿಸಿವೆ.

**ಹಗುರ ಮಷೀನ್ ಗನ್ ಹಾಗೂ ಸುಧಾರಿತ ಸ್ಫೋಟಗಳ ಬಳಕೆ**

ಸಿಆರ್‌ಪಿಎಫ್‌ನ ವಿಶೇಷ ಹೋರಾಟ ಘಟಕವಾದ ಕೋಬ್ರಾ ಮತ್ತು ಇತರೆ ದಳಗಳಿಗೆ ಸೇರಿದ 1,500 ಸಿಬ್ಬಂದಿ ಛತ್ತೀಸ್‌ಘಡದ ಬಿಜಾಪುರ - ಸುಕ್ಮಾ ಜಿಲ್ಲೆಗಳ ಗಡಿಯಲ್ಲಿ ಕಾರ್ಯಾಚರಣೆ ನಡೆಸಿತ್ತು. ಈ ಪ್ರದೇಶದಲ್ಲಿ ಮಾವೋಗಳು ಇರುವ ಸುಳಿವಿನ ನಂತರ ಕಾರ್ಯಾಚರಣೆ ನಡೆಸಲಾಗಿತ್ತು. ಆಗ ಕನಿಷ್ಠ 400 ನಕ್ಸಲರು ಮತ್ತು ಪೀಪಲ್ಸ್ ಲಿಬರೇಷನ್ (2ನೇ ಪುಟಕ್ಕೆ)

### ನಕ್ಸಲ್ ದಾಳಿಗೆ 17 ಭದ್ರತಾ ಸಿಬ್ಬಂದಿ ಸಾವು

ರಾಯಪುರ, ಏ. 4 - ಛತ್ತೀಸ್‌ಘಡದ ಅರಣ್ಯ ಪ್ರದೇಶಗಳಲ್ಲಿ ನಕ್ಸಲರ ಗುಂಡಿಗೆ ಸಿಲುಕಿ ಮೃತಪಟ್ಟ 17 ಸಿಆರ್‌ಪಿಎಫ್ ಸಿಬ್ಬಂದಿ ಮೃತದೇಹ ಭಾನುವಾರ ಪತ್ತೆಯಾಗಿದೆ. ಶನಿವಾರದಂದು ಐದು ಮೃತದೇಹಗಳು ಪತ್ತೆಯಾಗಿದ್ದವು. ಇದರೊಂದಿಗೆ ಕಾರ್ಯಾಚರಣೆಯಲ್ಲಿ ಮೃತರ ಸಂಖ್ಯೆ 22ಕ್ಕೆ ಏರಿಕೆಯಾಗಿದೆ. ಈ ವರ್ಷ ನಕ್ಸಲರು ನಡೆಸಿದ ಅತಿ ದೊಡ್ಡ ಹತ್ಯಾಕಾಂಡ ಇದಾಗಿದೆ. ಶನಿವಾರ (2ನೇ ಪುಟಕ್ಕೆ)

# ವಿಶ್ವ ಮಾನವತೆ ಮಠಗಳ ಉದ್ದೇಶವಾಗಬೇಕು

## ರವಿ ಹಂಜ್ ಅವರ ಪುಸ್ತಕಗಳ ಲೋಕಾರ್ಪಣೆಯಲ್ಲಿ ಮುರುಘಾ ಶರಣರು



ದಾವಣಗೆರೆ, ಏ. 4 - ವ್ಯಕ್ತಿ, ವ್ಯವಸ್ಥೆ ಹಾಗು ಸಮಾಜವನ್ನು ಸುಧಾರಿಸಲು ಮಠ ಇರಬೇಕೇ ಹೊರತು, ಮಠೀಯ ವ್ಯವಸ್ಥೆ ಬೆಳೆಸಲು ಅಲ್ಲ ಎಂದು ಚಿತ್ರದುರ್ಗ ಮುರುಘಾ ಮಠದ ಜಗದ್ಗುರು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಮೈಸೂರಿನ ಸಂವಹನ ಪ್ರಕಾಶಕರ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದ್ದ ರವಿ ಹಂಜ್ ಅವರ 'ರ ಠ ಈ ಕ' ಹಾಗೂ 'ಅಗಣಿತ ಅಲೆಮಾರಿ' ಪುಸ್ತಕಗಳ ಬಿಡುಗಡೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.


ಸುಧಾರಣೆಗೆ ಹಾಗೂ ಮಾನವೀಯ ಪ್ರಜ್ಞೆಗಾಗಿ ಮಠಗಳಿರಬೇಕು. ಮಠವೇ ಒಂದು ವ್ಯವಸ್ಥೆಯಂತಾಗದೇ, ಅದು ವ್ಯವಸ್ಥೆಯನ್ನು ಮೀರಿ ಬೆಳೆಯಬೇಕು. ಕುವೆಂಪು ಅವರು ಹೇಳಿದ ವಿಶ್ವ ಮಾನವ ಪ್ರಜ್ಞೆ ಬೆಳೆಸುವುದೇ ಮಠಗಳ ಉದ್ದೇಶವಾಗಬೇಕು ಎಂದು ಹೇಳಿದರು.

ಭಿಕ್ಷಾವೃತ್ತಿಯ ಜೊತೆ ಉಳ್ಳವರು ಗುರುತಿಸಿಕೊಳ್ಳಲು ಬಯಸುವುದಿಲ್ಲ. ಆದರೆ, ರಾಜನಾಗಬಹುದಾಗಿದ್ದ ಗೌತಮ ಬುದ್ಧ ಭಿಕ್ಷುಕನ ಸ್ಥಿತಿಗೆ ಬರುತ್ತಾನೆ. ಅಂತಹ ಸ್ಥಿತಿಗೆ ಬಂದ ನಂತರವೂ ದಾರ್ಶನಿಕನಾಗುವುದು ಭಾರತದಲ್ಲಿ ಮಾತ್ರ ಸಾಧ್ಯ ಎಂದು ಶ್ರೀಗಳು ಹೇಳಿದರು.

ಅಲ್ಲಮಪ್ರಭು ದೇವರು ಅಲೆಮಾರಿತನವನ್ನು ಸವಾಲಾಗಿ ಸ್ವೀಕರಿಸಿದರು. ಅಲೆಮಾರಿತನದಲ್ಲೇ ಅಧ್ಯಾತ್ಮ ರಹಸ್ಯ ಭೇದಿಸಿದರು ಎಂದ ಶ್ರೀಗಳು, ಅಲೆಮಾರಿತನದ ಸುತ್ತಾಟದಿಂದ ಅನುಭವ ಸಿಗುತ್ತದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ, ಕನ್ನಡದಲ್ಲಿ ಪ್ರವಾಸ ಸಾಹಿತ್ಯ (2ನೇ ಪುಟಕ್ಕೆ)


# ಶ್ರೀ ಶಾಂತಿಲಾಲ್‌ಜಿ ಪೆರಾಜಮಲ್‌ಜಿ ನಿಧನ



ದಾವಣಗೆರೆ ಪಿ.ಜೆ.ಬಡಾವಣೆ, 4ನೇ ಮೇನ್, ವಿಶ್ವಾಸ್ ಅಪಾರ್ಟ್‌ಮೆಂಟ್ ವಾಸಿ,
ಅನೂಪ್ ಇಂಜಿನಿಯರಿಂಗ್ ಮಾಲೀಕರು, ಜೈನ್ ವಿದ್ಯಾಲಯ ಶಾಲೆಯ ಟ್ರಸ್ಟಿಗಳೂ ಆಗಿದ್ದ

**ಶ್ರೀ ಶಾಂತಿಲಾಲ್‌ಜಿ ಪೆರಾಜಮಲ್‌ಜಿ**

ಅವರು ದಿನಾಂಕ 04-04-2021ರ ಭಾನುವಾರ ಬೆಳಿಗ್ಗೆ 9-30ರ ಸುಮಾರಿಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 71 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಮೂವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 04-04-2021ರ ಭಾನುವಾರ ಸಂಜೆ 5 ಗಂಟೆಗೆ ನಗರದ ಜೈನ್ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
ಜೈನ್ ವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರು,
ಬೋಧಕ-ಬೋಧಕೇತರ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿ ವೃಂದ

# ನ್ಯಾಯ ಸಮ್ಮತ ಬೇಡಿಕೆ ಈಡೇರಿಸಲು ಬದ್ಧ: ಸಿಎಂ

**(1ನೇ ಪುಟದಿಂದ)** ಸಾಹಿತ್ಯದ ಮೂಲಕ ಜನರ ಮನ ಗೆದ್ದವರು. ಅವರ ಸರಳತೆ, ಸಾಮಾಜಿಕ ಕಳಕಳಿ ಸರ್ವಕಾಲಿಕವಾದದ್ದು. ಈ ನಿಟ್ಟಿನಲ್ಲಿ ಶ್ರೀ ನಿರಂಜನಾನಂದಪುರಿ ಶ್ರೀಗಳೂ ಕೂಡ ಸಮಾಜಕ್ಕೆ ಉತ್ತಮ ಕೊಡುಗೆ ನೀಡುವ ಪ್ರಯತ್ನದಲ್ಲಿ ಸಫಲತೆ ಕಂಡಿದ್ದಾರೆ ಎಂದು ಶ್ಲಾಘಿಸಿದ್ದಾರೆ.

ಸಮಸಮಾಜ ನಿರ್ಮಾಣ ಮಾಡಬೇಕೆಂಬ ಸರ್ಕಾರದ ಆಶಯಕ್ಕೆ ಎಲ್ಲಾ ಮಠಗಳು ಕೈ ಜೋಡಿಸಿರುವುದು ಸಂತಸ ತಂದಿದೆ ಎಂದು ಯಡಿಯೂರಪ್ಪ ಹೇಳಿದರು.

ಆರಂಭದಲ್ಲಿ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿ, 2020 ಪ್ರಪಂಚಕ್ಕೆ ಕರಾಳ ವರ್ಷ. ಈ ಕಾರ್ಯಕ್ರಮವನ್ನು 2020 ರಲ್ಲೇ ಮಾಡಲು ತೀರ್ಮಾನಿಸಿದ್ದೆವು. ಅಷ್ಟರಲ್ಲೇ ಕೊರೊನಾದಿಂದಾಗಿ ಲಾಕ್‌ಡೌನ್ ಆದ ಕಾರಣ ಕಾರ್ಯಕ್ರಮ ರದ್ದಾಯಿತು. ಈ ವರ್ಷವಾದರೂ ಅದ್ಧೂರಿ ಕಾರ್ಯಕ್ರಮ ಮಾಡೋಣ ಎಂದುಕೊಂಡು ತಯಾರಿ ಮಾಡಿಕೊಂಡೆವು. ಅಷ್ಟೊತ್ತಿಗೆ ರೂಪಾಂತರ ವೈರಸ್ ಬಂದಿದೆ ಎಂಬ ಕಾರಣದಿಂದಾಗಿ ಕಾರ್ಯಕ್ರಮವನ್ನು ಹೆಚ್ಚು ಜನರನ್ನು ಸೇರಿಸದೆ ಸರಳವಾಗಿ ಹಮ್ಮಿಕೊಂಡಿದ್ದೇವೆ.

4 ವರ್ಷಗಳ ಹಿಂದೆ ಈ ಭೂಮಿ ಬರಡಾಗಿತ್ತು, ಈ 11 ಎಕರೆ ಜಮೀನು ನಮ್ಮ ಕೈಗೆ ಸಿಕ್ಕ ನಂತರ ಸಮೃದ್ಧಿಗೊಳಿಸಿದ್ದೇವೆ. 35 ರಿಂದ 40 ಕೋಟಿ ರೂ. ವೆಚ್ಚದ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಇಲ್ಲಿ ಮಾಡಬೇಕಾದ ಎಲ್ಲಾ ಕೆಲಸಗಳು ಮುಗಿದಿರುವುದರಿಂದ ನಮ್ಮ ಮುಂದಿನ ಪ್ರಯಾಣ ಶ್ರೀಕ್ಷೇತ್ರ ಮೈಲಾರಕ್ಕೆ ಸಾಗಿದೆ.

ಅಲ್ಲಿನ ಶಾಖಾಮಠದ ಆಶ್ರಯದಲ್ಲಿ ಶಿಕ್ಷಣ ಕೇಂದ್ರ ಹಾಗೂ ಹಾಸ್ಟೆಲ್ ನಿರ್ಮಾಣಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು 10 ಕೋಟಿ ರೂ. ಅನುದಾನ ಘೋಷಣೆ ಮಾಡಿ, ಈಗಾಗಲೇ 2.50 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಹಾಗಾಗಿ ಅಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಬೇಕಿದೆ. ಕಾಂಗ್ರೆಸ್ ಸರ್ಕಾರದಲ್ಲೂ ವಿದ್ಯಾರ್ಥಿನಿಲಯ ಸೇರಿದಂತೆ ವಿವಿಧ ಕಟ್ಟಡಗಳಿಗೆ ಅನುದಾನ ನೀಡಿದ್ದರು ಎಂದು ಸ್ವಾಮೀಜಿ ಸ್ಮರಿಸಿದರು.

ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸಬೇಕೆಂಬ ಉದ್ದೇಶದಿಂದ ಈಗಾಗಲೇ ಪಾದಯಾತ್ರೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ. ಅಲ್ಲಿಂದ ಇಲ್ಲಿಯತನಕ ನಾವು ಮೀಸಲಾತಿ ವಿಚಾರವಾಗಿ ಯಾವ ಹೇಳಿಕೆ ಕೊಟ್ಟಿಲ್ಲ. ಏಕೆಂದರೆ ಸರ್ಕಾರ ಈ ನಿಟ್ಟಿನಲ್ಲಿ

### 30 ಬೀರದೇವರು :

**3 ದಿನಗಳ ಕಾರ್ಯಕ್ರಮಕ್ಕಾಗಿ ಮಠಕ್ಕೆ ಆಗಮಿಸಿದ್ದ ವಿವಿಧ ತಾಲ್ಲೂಕುಗಳ 30 ಬೀರದೇವರ ದರ್ಶನಕ್ಕಾಗಿ ಜನ ಮುಗಿಬಿದ್ದಿದ್ದರು. ಅಲ್ಲದೆ ಮಹಾಸಂಕಲ್ಪದ ಪೂಜೆ, ಹೋಮ ಎಲ್ಲರನ್ನೂ ಆಕರ್ಷಿಸಿತು. ಪ್ರಾಣ ಪ್ರತಿಷ್ಠಾಪನೆ : ಸೋಮವಾರ ಬೆಳಿಗ್ಗೆ 11.30 ಕ್ಕೆ ನೂತನ ಹೋರಬೀರದೇವರ ಪ್ರಾಣ ಪ್ರತಿಷ್ಠಾಪನೆ ಹಾಗೂ ಮಹಾಕುಂಭಾಭಿಷೇಕ ಕಾರ್ಯಕ್ರಮವನ್ನು ವಿವಿಧ ಮಠಾಧೀಶರ ಸಮ್ಮುಖದಲ್ಲಿ ಹಮ್ಮಿಕೊಳ್ಳಲಾಗಿದೆ.**

ಪ್ರಯತ್ನ ನಡೆಸಿದೆ ಎಂಬ ಮಾಹಿತಿಯನ್ನು ಗೃಹ ಸಚಿವರು ನಮಗೆ ನೀಡಿದ್ದರಿಂದ ನಾವು ಆಶಾಭಾವನೆಯಲ್ಲಿದ್ದೇವೆ ಎಂದ ಶ್ರೀಗಳು, ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಬಗ್ಗೆ ಸಮಾಜಕ್ಕೆ ಮುಖ್ಯಮಂತ್ರಿಗಳು ತಿಳಿಸಬೇಕು. ಮತ್ತು ಹೊಸದುರ್ಗ ಶಾಖಾ ಮಠದಲ್ಲಿ ನಿರ್ಮಿಸುತ್ತಿರುವ ಕನಕದಾಸರ ಏಕಶಿಲಾ ಪ್ರತಿಮೆಗೆ ಅನುದಾನ ಹಾಗೂ ನೆನೆಗುದಿಗೆ ಬಿದ್ದಿರುವ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಯೋಜನೆಗಳಿಗೆ ಅನುದಾನ ನೀಡಬೇಕು ಎಂದು ಹೇಳಿದರು.

ಉಪಚುನಾವಣೆ ನಂತರ ಕುರುಬರ ಎಸ್‌ಟಿ ಹೋರಾಟ ಸಮಿತಿಯವರ ಸಭೆ ಕರೆದು ಚರ್ಚಿಸಿ ಎಂದು ಮನವಿ ಮಾಡಿದರು.

ಗೃಹ ಸಚಿವ ಬಸವರಾಜ ಬೊಮ್ಮಾಯಿ ಮಾತನಾಡಿ, ಎಸ್ಟಿ ಮೀಸಲಾತಿ ಪ್ರಮಾಣವನ್ನು ಶೇ. 7.5 ಕ್ಕೆ ಹೆಚ್ಚಿಸಬೇಕು ಮತ್ತು ಕುರುಬರನ್ನು ಎಸ್ಟಿಗೆ ಹಾಗೂ ಪಂಚಮಸಾಲಿ ಸಮಾಜವನ್ನು 2ಎ ಗೆ ಸೇರಿಸಬೇಕು ಎಂಬ ಬೇಡಿಕೆ ಸೇರಿದಂತೆ ಇನ್ನೂ ಅನೇಕರು ಮೀಸಲಾತಿ ಕೇಳುತ್ತಿದ್ದಾರೆ. ಇವೆಲ್ಲವನ್ನು ಪರಿಗಣಿಸಿ ನಾವು ಸುಪ್ರೀಂ ಕೋರ್ಟ್ ಅನುಮತಿ ಕೇಳಿದ್ದೇವೆ. ಕೋರ್ಟ್ ಕೂಡ ಒಳ್ಳೆಯ ತೀರ್ಮಾನ ನೀಡಬಹುದೆಂಬ ನಿರೀಕ್ಷೆಯಲ್ಲಿದ್ದೇವೆ ಎಂದರು.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, ಕುರುಬ ಸಮಾಜದ ಇತಿಹಾಸದಲ್ಲಿ ಎಸ್‌ಟಿ ಮೀಸಲಾತಿ ಪಾದಯಾತ್ರೆ ದಾಖಲೆ ನಿರ್ಮಿಸುವುದರ ಜೊತೆಗೆ ಎಲ್ಲಾ ಕುರುಬರನ್ನು ಒಂದಾಗಿಸಿದೆ. ಮೂರು ಪಕ್ಷಗಳ ಮುಖಂಡರು ಒಗ್ಗಟ್ಟಾಗಿದ್ದೇವೆ. ಆದ್ದರಿಂದ ಅದೊಂದು ಮಾದರಿ ಪಾದಯಾತ್ರೆ ಎಂದು ಬಣ್ಣಿಸಿದರು. ಕುರುಬರಿಗೆ ಅಷ್ಟೇ ಮೀಸಲಾತಿ ಕೇಳುತ್ತಿಲ್ಲ. ಕೋಲಿ, ಸವಿತಾ, ಉಪ್ಪಾರ, ಮಡಿವಾಳ ಸಮಾಜಗಳಿಗೂ ಮೀಸಲಾತಿ ಕೊಡಬೇಕೆಂದು ಕೇಳಿದ್ದೇವೆ ಎಂದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ತುಮಕೂರು ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ಈ ಮಠದಲ್ಲಿ ಕೇವಲ 4 ವರ್ಷಗಳಲ್ಲಿ ಆಗಿರುವ ಅಭಿವೃದ್ಧಿಯಿಂದ ಇತಿಹಾಸ ನಿರ್ಮಾಣವಾಗಿದೆ. ಇದರ ಕೀರ್ತಿ ಶ್ರೀಗಳಿಗೆ ಸಲ್ಲುತ್ತದೆ ಎಂದರು.

ಶರಣರ, ದಾಸರ ಕಾಲಗಳು ಈ ನಾಡಿಗೆ ಮಹಾಬೆಳಕು ನೀಡಿದ್ದು, ಆ ಬೆಳಕಿನಲ್ಲಿ ಇಂದು ನಾವೆಲ್ಲರೂ ಒಳ್ಳೆಯ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದೇವೆ. ಮಠಗಳ ಅನನ್ಯ ಸೇವೆ ಗುರುತಿಸಿದ ಯಡಿಯೂರಪ್ಪ ಅವರು ಮಠಗಳಿಗೆ ಅನುದಾನ ನೀಡಿ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಸಚಿವ ಆರ್. ಶಂಕರ್ ಮಾತನಾಡಿದರು. ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ, ತಿಂಥಿಣಿ ಶಾಖಾಮಠದ ಶ್ರೀ ಸಿದ್ಧರಾಮಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿರೋಧ ಪಕ್ಷದ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗೈರು ಹಾಜರಾದ ಹಿನ್ನೆಲೆಯಲ್ಲಿ ಮಾಜಿ ಸಚಿವ ಹೆಚ್. ಎಂ. ರೇವಣ್ಣ ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಎಸ್. ರಾಮಪ್ಪ, ಎಂ.ಪಿ ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ. ರಾಮಚಂದ್ರ, ಪ್ರೊ. ಎ. ಲಿಂಗಪ್ಪ, ಬ್ಯಾಡಗಿ ಶಾಸಕ ವಿರೂಪಾಕ್ಷಪ್ಪ, ರಾಣೇಬೆನ್ನೂರು ಶಾಸಕ ಅರುಣ್‌ಕುಮಾರ್ ಪೂಜಾರ್, ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಜಿ.ಪಂ. ಸದಸ್ಯರಾದ ಕೆ.ಇ. ಕಾಂತೇಶ್, ಹದಡಿ ನಿಂಗಪ್ಪ, ಎಂ.ಆರ್. ಮಹೇಶ್, ಶಿವಮೊಗ್ಗದ ಜೆಡಿಎಸ್ ಮುಖಂಡ ಶ್ರೀಕಾಂತ್, ಚಲನಚಿತ್ರ ನಿರ್ದೇಶಕ ಆರ್. ಚಂದ್ರು, ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಕೆ. ರೇವಣಸಿದ್ದಪ್ಪ, ಕುಣೆಬೆಳಕೆರೆ ದೇವೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಕೋಳೇನಹಳ್ಳಿ ಸತೀಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ ಮತ್ತಿತರರು ವೇದಿಕೆಯಲ್ಲಿದ್ದರು.

ಇದೇ ಸಂದರ್ಭದಲ್ಲಿ ಆಯುಷ್ ಹಾಗೂ ಶಂಕರ್ ಟಿವಿಯ ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು. ಕುಮಾರಿ ರಿತಿಷ್ ಪ್ರಾರ್ಥಿಸಿದರು. ಮಂಜುನಾಥ್ ಮಾಗುಂದಿ ಸ್ವಾಗತಿಸಿದರು, ಉಪನ್ಯಾಸಕ ಎಳೆಹೊಳೆ ಬೀರೇಶ್, ಶಿಕ್ಷಕ ಪದ್ದಪ್ಪ ನಿರೂಪಿಸಿದರೆ, ಉಪನ್ಯಾಸಕ ರಾಜನಹಳ್ಳಿ ಬೀರೇಶ್ ವಂದಿಸಿದರು.

## ಹರಿಹರ ಪಂಚಮಸಾಲಿ ಪೀಠಕ್ಕೆ ಮುಖ್ಯಮಂತ್ರಿ ಯಡಿಯೂರಪ್ಪ ಭೇಟಿ



ಮಲೇಬೆನ್ನೂರು, ಏ.4- ಬೆಳ್ಳೂಡಿ ಶಾಖಾಮಠದ ಕಾರ್ಯಕ್ರಮ ಮುಗಿದ ನಂತರ ಅಲ್ಲಿಯೇ ಮಧ್ಯಾಹ್ನದ ಊಟ ಮಾಡಿದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಬೆಂಗಳೂರಿಗೆ ತೆರಳುವ ಮಾರ್ಗದಲ್ಲಿ ಪಂಚಮಸಾಲಿ ಪೀಠಕ್ಕೆ ತೆರಳಿ ಕೆಲಹೊತ್ತು ಶ್ರೀ ವಚನಾನಂದ ಸ್ವಾಮೀಜಿ ಅವರ ಜೊತೆ ಮಾತುಕತೆ ನಡೆಸಿದರು. ಸಂಸದ ಜಿ.ಎಂ ಸಿದ್ದೇಶ್ವರ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಆರ್. ಶಂಕರ್, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಅರುಣ್‌ಕುಮಾರ್ ಪೂಜಾರ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಲಸಿಕೆ ಪಡೆದ ಜಿಲ್ಲಾ ನ್ಯಾಯಾಧೀಶರು





ದಾವಣಗೆರೆ, ಏ.4- ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಕೆ.ಬಿ. ಗೀತಾ, ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶ ಕೆಂಗಬಾಲಯ್ಯ, ಹಿರಿಯ ಸಿವಿಲ್ ನ್ಯಾಯಾಧೀಶ ಪ್ರಭು ಎನ್. ಬಡಿಗೇರ್ ನಿನ್ನೆ ಕೋವಿಡ್ ಲಸಿಕೆ ಪಡೆದರು. ಲಸಿಕೆ ಪಡೆದ ನಂತರ ಮಾತನಾಡಿದ ಜಿಲ್ಲಾ ನ್ಯಾಯಾಧೀಶರಾದ ಗೀತಾ ಅವರು ಲಸಿಕೆ ಕೋವಿಡ್ ಸಾಂಕ್ರಾಮಿಕದ ವಿರುದ್ಧ ಹೋರಾಡಲು ಸಹಕಾರಿಯಾಗಿದೆ. ಲಸಿಕೆಯಿಂದಾಗುವ ಲಾಭಗಳು ಸಾಕಷ್ಟಿವೆ. ಲಸಿಕೆ ಪಡೆದರೆ ಕೋವಿಡ್ ಬಂದರೂ ಅದರಿಂದ ಉಂಟಾಗುವ ಪ್ರತಿಕೂಲ ಪರಿಣಾಮಗಳು ಮತ್ತು ಮರಣವನ್ನು ತಪ್ಪಿಸಬಹುದು. ನಾವು ಲಸಿಕೆ ಪಡೆದಿದ್ದೇವೆ. ಲಸಿಕೆ ಪಡೆಯಲು ಅರ್ಹರಿರುವ ಎಲ್ಲರೂ ಲಸಿಕೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು. ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿಗಳಾದ ಶ್ರೀನಿವಾಸ್, ಶ್ರೀಧರ್ ಹಾಗೂ ಸಿಬ್ಬಂದಿ ಸಹ ಲಸಿಕೆ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ರೇವಣ್ಣ ಅವರು ಕೂಡಾ ಲಸಿಕೆ ಪಡೆದರು.

# ಶಾಸಕ ಬಸನಗೌಡ ಯತ್ನಾಳ್ ಅರಿವೆ ಹಾವು ಬಿಡುತ್ತಿದ್ದಾರೆ

### ರೇಣುಕಾಚಾರ್ಯ ಆರೋಪ

ಮಲೇಬೆನ್ನೂರು, ಏ.4- ಶಾಸಕ ಬಸನಗೌಡ ಯತ್ನಾಳ್ ದುರಂತ, ದುರಹಂಕಾರಿ ನಾಯಕನಾಗಿದ್ದು, ಅವರನ್ನು ಪಕ್ಷದಿಂದ ಉಚ್ಚಾಟನೆಗೊಳಿಸಲು 65 ಶಾಸಕರು ಸಹಿ ಮಾಡಿದ್ದಾರೆ. ಅವರನ್ನು ಪಕ್ಷಕ್ಕೆ ವಾಪಸ್ ಕರೆತಂದ ತಪ್ಪಿಗೆ ಯಡಿಯೂರಪ್ಪನವರಿಗೆ ಇಂತಹ ಗಿಫ್ಟ್ ಕೊಡುತ್ತಿದ್ದಾರೆ ಎಂದು ಶಾಸಕ ಎಂ.ಪಿ. ರೇಣುಕಾಚಾರ್ಯ ಯತ್ನಾಳ್ ಮೇಲೆ ಹರಿಹಾಯ್ದರು.

ಬೆಳ್ಳೂಡಿ ಶಾಖಾಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಯತ್ನಾಳ್ ವಿರುದ್ಧ ವಾಗ್ದಾಳಿ ಮುಂದುವರೆಸಿದ ರೇಣುಕಾಚಾರ್ಯ ಅವರು, ಪದೇ ಪದೇ ಸಿಎಂ ಸ್ಥಾನಕ್ಕೆ ಸವಾಲು ಹಾಕುತ್ತಾರೆ. ಪ್ರತಿ ತಿಂಗಳು ಒಂದೊಂದು ಡೇಟ್ ಕೊಡುತ್ತಾ ಅವರು ದಿನನಿತ್ಯ ಅರಿವೆ ಹಾವು ಬಿಡುತ್ತಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಆಗುತ್ತೆ ಅಂತಾರೆ ಎಲ್ಲವೂ ಠುಸ್ ಆಗಲಿದೆ. ಮೊದಲು ನಿಮ್ಮ ನಡವಳಿಕೆ ಸರಿ ಮಾಡಿಕೊಳ್ಳಿ. ಕಾಂಗ್ರೆಸ್ ಏಜೆಂಟರಂತೆ ವರ್ತಿಸುವುದನ್ನು ಮೊದಲು ಬಿಡಿ ಎಂದು ಯತ್ನಾಳ್ ಹೇಳಿಕೆಗಳನ್ನು ಲೇವಡಿ ಮಾಡಿದರು.

ವಿಜಯೇಂದ್ರ, ಡಿ.ಕೆ. ಶಿವಕುಮಾರ್ ಸೇರಿ ಹೊಸ ಪಕ್ಷ ಕಟ್ಟುತ್ತಾರೆ ಎಂಬುದಕ್ಕೆ ಪ್ರತಿಕ್ರಿಯೆ ನೀಡಿದ ರೇಣುಕಾಚಾರ್ಯ ಅವರು, ವಿಜಯೇಂದ್ರ ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿದ್ದು, ರಾಜ್ಯಾದ್ಯಂತ ಓಡಾಡಿ ಪಕ್ಷ ಸಂಘಟನೆ ಮಾಡುತ್ತಿದ್ದಾರೆ. ವಿನಾಕಾರಣ ಅವರ ಮೇಲೆ ಈ ರೀತಿ ಆರೋಪಿಸುವುದು ಸರಿಯಲ್ಲ ಎಂದರು.

ಈಶ್ವರಪ್ಪ, ಯಡಿಯೂರಪ್ಪ ಮಧ್ಯೆ ವೈಮನಸ್ಸಿನ ಶಮನದ ಬಗ್ಗೆ ಮಾತನಾಡಿದ ಅವರು, ಪಕ್ಷದ ಆರಂಭದಿಂದ ಯಡಿಯೂರಪ್ಪ, ಅನಂತಕುಮಾರ್ ಪಕ್ಷ ಕಟ್ಟಿ ಬೆಳೆಸಿದ್ದಾರೆ. ಈಶ್ವರಪ್ಪನವರು ಹಿರಿಯರು, ಅನುಭವಿಗಳು. ನಾಲ್ಕು ಗೋಡೆ ಮಧ್ಯೆ ಮಾತನಾಡಬೇಕಾದ ವಿಷಯವನ್ನು ರಾಜ್ಯಪಾಲರ ಬಳಿ ಒಯ್ದಿದ್ದು ತಪ್ಪು. ಅನಗತ್ಯವಾಗಿ ಕಾಂಗ್ರೆಸ್‌ನವರ ಕೈಗೆ ಅಸ್ತ್ರ ಕೊಟ್ಟಂತಾಗಿದೆ. ಉಪಚುನಾವಣೆ ಹೊತ್ತಲ್ಲ ಇದು ಸರಿಯಲ್ಲ. ವಿಶೇಷ ಅನುದಾನ ನೀಡುವ ಪರಮಾಧಿಕಾರ ಸಿಎಂ ಅವರಿಗಿದೆ. ಅವರ ವಿವೇಚನೆಯಂತೆ ಬಳಸಿದ್ದಾರೆ. ಈ ವಿಷಯವನ್ನು ಚರ್ಚಿಸಿ ಪರಿಹರಿಸಿಕೊಳ್ಳಬಹುದು ಎಂದರು.

ವರಿಷ್ಠರಿಗೆ ಈ ಬಗ್ಗೆ ಮಾಹಿತಿ ನೀಡಿದ್ದೇವೆ, ಎಲ್ಲವೂ ಸರಿ ಹೋಗುತ್ತೆ ಎಂದು ರೇಣುಕಾಚಾರ್ಯ ಹೇಳಿದರು.

# ಸಮಪಾಲು-ಸಮಬಾಳು ಸಿದ್ಧಾಂತದಡಿ ಸ್ಲಂ ಜನಾಂದೋಲನ ಮುನ್ನಡೆ



ದಾವಣಗೆರೆ, ಏ.4- ಸ್ಲಂ ಜನಾಂದೋಲನ ಸಂಘಟನೆ ಅಂಬೇಡ್ಕರ್ ಅವರ ಸಮಪಾಲು - ಸಮಬಾಳು ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಮುನ್ನಡೆಯುತ್ತಿದೆ. ಜನಪರ ಹೋರಾಟದ ಮೂಲಕ ಒಂದು ರಾಜ್ಯದಲ್ಲಿ ಜಾಗೃತಿ ಆಂದೋಲನ ಉಂಟು ಮಾಡಿದೆ ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಎಲ್.ಎಚ್. ಅರುಣ್ ಕುಮಾರ್ ಹೇಳಿದರು.

ಸ್ಲಂ ಜನಾಂದೋಲನ , ಸಾವಿತ್ರ ಬಾಫುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ವತಿಯಿಂದ ಬಾಷಾ ನಗರದ ಎಸ್.ಎಸ್. ಶಾದಿಮಹಲ್‌ನಲ್ಲಿ ನಿವೇಶನ ರಹಿತರ ಸಮಾವೇಶ ಹಾಗೂ ಸ್ಲಂ ನಿವಾಸಿಗಳ ಸಂಘಟನಾತ್ಮಕ ಹೋರಾಟ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು. ಈ ಜನರ ಬದುಕಿನ ಅವಶ್ಯಕತೆಗಳಾದ ನೀರು, ಸೂರು, ಶಿಕ್ಷಣ ಹಾಗೂ ಇತರೆ ಹಕ್ಕುಗಳಿಗಾಗಿ ದಶಕದಲ್ಲಿ ಅತ್ಯಂತ ಜನಪರವಾಗಿ ಕಾರ್ಯನಿರ್ವಹಿಸಿದೆ ಎಂದು ಶ್ಲಾಘಿಸಿದರು.

ರಾಜ್ಯ ಸಂಚಾಲಕ ನರಸಿಂಹ ಮೂರ್ತಿ ಮಾತನಾಡಿ, ಕೊಳಚೆ ಪ್ರದೇಶಗಳಲ್ಲಿ ಕನಿಷ್ಟ ಜೀವನ ನಡೆಸುತ್ತಿರುವ ಸಮುದಾಯಗಳ ನೆರವಿಗೆ ಸರ್ಕಾರ ಬರಬೇಕಾಗಿದೆ. ವಸತಿ ರಹಿತರಿಗೆ ಮತ್ತು ಬಾಡಿಗೆ ಮನೆಗಳಲ್ಲಿ ವಾಸ ಮಾಡುತ್ತಿರುವವರಿಗೆ ವಸತಿ ಕಲ್ಪಿಸಬೇಕಾಗಿದೆ. ನಗರದಲ್ಲಿ ಎರಡು ಸಾವಿರ ವಸತಿ ರಹಿತ ಸ್ಲಂ ನಿವಾಸಿಗಳನ್ನು ಗುರುತಿಸಲಾಗಿದೆ. ಇಂದಿಗೂ ಸಹ ಮೂಲ ಸೌಕರ್ಯಗಳಿಲ್ಲದ ಕೊಳಗೇರಿಗಳಲ್ಲಿ ವಾಸವಾಗಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಪಾಲಿಕೆ ಉಪ ಆಯುಕ್ತರಾದ ನಾಗರತ್ನಮ್ಮ ಮನವಿ ಸ್ವೀಕರಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ದೂಡಾ ಮಾಜಿ ಅಧ್ಯಕ್ಷ ಅಯೂಬ್ ಪೈಲ್ವಾನ್ , ಕೊಳಗೇರಿ ಅಭಿವೃದ್ಧಿ ಮಂಡಳಿ ಅಧಿಕಾರಿ ಎಸ್.ಎಲ್. ಆನಂದಪ್ಪ, ಪಾಲಿಕೆ ಸದಸ್ಯ ಅಹಮದ್ ಕಬೀರ ಖಾನ್, ಸಂಘಟನೆಯ ಜನಾರ್ದನ ಹಳ್ಳಿಬೆಂಚಿ, ಇಮ್ತಿಯಾಜ್ ಆರ್. ಮಾನ್ವಿ, ದಲಿತ ಮುಖಂಡ ಹೆಗ್ಗೆರೆ ರಂಗಪ್ಪ, ದಾದಾಪೀರ್ ಕೊಡಪಾನ್, ಸ್ಲಂ ಜನಾಂದೋಲ ಜಿಲ್ಲಾ ಸಂಘಟನೆ ಮುಖಂಡರಾದ ಎಂ. ಸಬೀರ್ ಸಾಬ್, ರೇಣುಕಾ ಯಲ್ಲಮ್ಮ, ಸಾವಿತ್ರಮ್ಮ, ದೇವೇಂದ್ರಪ್ಪ, ಬಾಲಪ್ಪ, ಸುಹೀಲ್ ಬಾಷಾ, ಮುಬಾರಕ್, ಶಾಹೀನ್ ಬೇಗಂ, ಮಂಜುಳಾ ಇನ್ನಿತರರಿದ್ದರು.

## ಜಿಮ್‌ಗಳಿಗೆ ವಿನಾಯಿತಿ

**(1ನೇ ಪುಟದಿಂದ)** ತಿಳಿಸಲಾಗಿದೆ. ಸರ್ಕಾರದ ನಿಯಮ ಉಲ್ಲಂಘಿಸಿದರೆ ಜಿಮ್‌ಗಳನ್ನು ಬಂದ್ ಮಾಡುವುದಾಗಿಯೂ ಮುಖ್ಯ ಕಾರ್ಯದರ್ಶಿ ಎಚ್ಚರಿಕೆ ನೀಡಿದ್ದಾರೆ.

ಸೋಂಕು ನಿಯಂತ್ರಣ ಉದ್ದೇಶದಿಂದ ರಾಜ್ಯದಲ್ಲಿ ಜಿಮ್‌ಗಳನ್ನು ಬಂದ್ ಮಾಡುವ ನಿರ್ಧಾರಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ರಾಜ್ಯ ಜಿಮ್‌ಗಳ ಮಾಲೀಕರ ಸಂಘ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ ಜಿಮ್‌ಗಳ ಕಾರ್ಯನಿರ್ವಹಣೆಗೆ ಅವಕಾಶ ಕಲ್ಪಿಸಬೇಕು ಎಂದು ಕೇಳಿತ್ತು. ಮನವಿ ಪರಿಗಣಿಸಿ ಸರ್ಕಾರ ತನ್ನ ಆದೇಶದಲ್ಲಿ ಮಾರ್ಪಾಟು ಮಾಡಿದೆ.

## ವಿಶ್ವ ಮಾನವತೆ ಉದ್ದೇಶವಾಗಬೇಕು

**(1ನೇ ಪುಟದಿಂದ)** ಬಹಳ ಇದೆ. ಹೊರದೇಶಕ್ಕೆ ಹೋದವರು ಅಲ್ಲಿಯ ತಮ್ಮ ಅನುಭವಗಳನ್ನೇ ಬರೆಯುತ್ತಾರೆ. ಆದರೆ ರವಿ ಅವರು ಹೊರ ದೇಶಗಳ ಸುತ್ತಿದ ನಂತರ ತಮ್ಮ ಹುಟ್ಟೂರಿನ ಅನುಭವಗಳ ಪುಸ್ತಕ ಬರೆದಿರುವುದು ವಿಶೇಷವಾಗಿದೆ ಎಂದರು.

ಕೃತಿಗಳ ಲೋಕಾರ್ಪಣೆ ಮಾಡಿ ಮಾತನಾಡಿದ ಚಿತ್ರನಿರ್ದೇಶಕ ಬಿ.ಎಸ್. ಲಿಂಗದೇವರು, ಕಥೆ ಕೇಳುವುದು, ಸಾಹಿತ್ಯ ಹಾಗೂ ಸಿನಿಮಾಗಳಿಂದ ಮನುಷ್ಯನಿಗೆ ಸಹಜ ಗುಣಗಳಿಂದ ಬಿಡುಗಡೆಯಾದ ಭಾವ ಸಿಗುತ್ತದೆ. ಮನುಷ್ಯನ ಸಹಜ ಗುಣದಿಂದ ಮುಕ್ತಗೊಳಿಸುವುದೇ ಸಾಹಿತ್ಯದ ಶಕ್ತಿಯಾಗಿದೆ ಎಂದರು.

ಮೈಸೂರಿನ ಹಿರಿಯ ಸಾಹಿತಿ ಪ್ರೊ. ಮಲೆಯೂರು ಗುರುಸ್ವಾಮಿ ಮಾತನಾಡಿ, ಆತ್ಮಚರಿತ್ರೆಗಳು ತಮ್ಮ ಬಗ್ಗೆ ಹಾಗೂ ತಮ್ಮ ವಂಶದ ಬಗ್ಗೆ ಹೊಗಳಿಕೊಳ್ಳುವ ಆತ್ಮರತಿಗಳಾಗಬಾರದು. ಸಾಕ್ಷಿಪ್ರಜ್ಞೆ ಹಾಗೂ ಒಳನೋಟ ಹೊಂದಿ ಜಾತಿಯಂತಹ ಮಿತಿಗಳನ್ನು ಮೀರಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಮಾತನಾಡಿ, ರವಿ ಹಂಜ್ ಅವರ ಕೃತಿಗಳಲ್ಲಿ ಬದುಕಿನ ಅಲೆಮಾರಿತನದ ಚಿತ್ರಣ ಇದೆ. ಬದಲಾವಣೆ, ಪರಿವರ್ತನೆ ಅರಿವು ಹಾಗೂ ಜ್ಞಾನದ ಕಡೆ ನಿರಂತರ ಪ್ರಯಾಣದ ಚಿತ್ರಣವಿದೆ ಎಂದರು.

ಸಮಾರಂಭದಲ್ಲಿ ಕೃತಿಕಾರ ರವಿ ಹಂಜ್, ಸಾಹಿತಿ ಡಾ. ಆನಂದ್ ಋಗ್ವೇದಿ, ಬಿಎಸ್‌ಸಿ ಸಮೂಹ ಶಿವಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಮುದೇಗೌಡ್ರು ಗಿರೀಶ್, ಕ.ಸಾ.ಪ. ಜಿಲ್ಲಾಧ್ಯಕ್ಷ ಡಾ. ಮಂಜುನಾಥ ಕುರ್ಕಿ, ಮೈಸೂರಿನ ಸಂವಹನ ಪ್ರಕಾಶಕ ಡಿ.ಎನ್. ಲೋಕಪ್ಪ, ಸಾಹಿತಿ ಡಿ. ನಾಗೇಂದ್ರಪ್ಪ ಮತ್ತಿತರರು ಉಪಸ್ಥಿತರಿದ್ದರು. ದಾಕ್ಷಾಯಿಣಿ ಹುಡೇದ ಪ್ರಾರ್ಥಿಸಿದರೆ, ಆನಂದ ಋಗ್ವೇದಿ ನಿರೂಪಿಸಿದರು.

## ಮಹಾರಾಷ್ಟ್ರದಲ್ಲಿ ವಾರಾಂತ್ಯದ ಲಾಕ್

**(1ನೇ ಪುಟದಿಂದ)** ಬೆಡ್ ನೀಡಿರುವ ವಿಡಿಯೋ ವೈರಲ್ ಆಗಿದೆ. ಛತ್ತೀಸ್‌ಘಡ ಹಾಗೂ ಮಧ್ಯ ಪ್ರದೇಶಗಳಿಂದಲೂ ಸೋಂಕಿತರು ಬರುತ್ತಿರುವುದೇ ಇದಕ್ಕೆ ಕಾರಣ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅವಿನಾಶ್ ವಿ. ಗವಾಂಡೆ ಹೇಳಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಒ.ಪಿ.ಡಿ.ಯಲ್ಲಿ ಶೇ.50-60 ಜನರಿದ್ದಾರೆ. ಸೋಂಕಿತರಿಗೆ ಆಕ್ಸಿಜನ್ ನೀಡುವುದು ತಡ ಮಾಡಬಾರದು. ಹೀಗಾಗಿ ರೋಗಿಗಳು ಹೆಚ್ಚಾದಾಗ ಬೆಡ್ ಹಂಚಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಅವರು ಅಲ್ಲಿ 15 ನಿಮಿಷಗಳಿಂದ ಅರ್ಧ ಗಂಟೆಯವರೆಗೆ ಈ ಸ್ಥಿತಿಯಲ್ಲಿ ಕಾಯಬೇಕಾಗುತ್ತದೆ ಎಂದು ಸ್ಪಷ್ಟನೆ ನೀಡಿದ್ದಾರೆ.

## ನಕ್ಸಲ್ ದಾಳಿಗೆ 17 ಭದ್ರತಾ ಸಿಬ್ಬಂದಿ ಸಾವು

**(1ನೇ ಪುಟದಿಂದ)** ಕಾರ್ಯಾಚರಣೆಗೆ ತೆರಳಿದ ಐವರು ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ್ದರು. 18 ಭದ್ರತಾ ಸಿಬ್ಬಂದಿ ಕಾಣೆಯಾಗಿದ್ದರು.

ಭಾನುವಾರ ಕಾಣೆಯಾದವರ ಪೈಕಿ 17 ಸಿಬ್ಬಂದಿಯ ಮೃತದೇಹಗಳು ಪತ್ತೆಯಾಗಿವೆ. ಅವರ ಕೆಲ ಶಸ್ತ್ರಗಳು ಕಣ್ಮರೆಯಾಗಿವೆ ಎಂದು ಛತ್ತೀಸ್‌ಘಡ ಪೊಲೀಸರು ತಿಳಿಸಿದ್ದಾರೆ.

ಛತ್ತೀಸ್‌ಘಡದ ಬಿಜಾಪುರ ಹಾಗೂ ಸುಕ್ಮಾ ಜಿಲ್ಲೆಗಳಲ್ಲಿ ಭದ್ರತಾ ಸಿಬ್ಬಂದಿ ಬೃಹತ್ ಕಾರ್ಯಾಚರಣೆ ನಡೆಸಿದ್ದರು. ಆಗ ಮಾವೋಗಳು ದಾಳಿ ನಡೆಸಿದಾಗ ಗುಂಡಿನ ಚಕಮಕಿ ನಡೆದಿತ್ತು.

## ಪುಷ್ಪಾ ಶಾಮನೂರು ಮಹಾಲಿಂಗಪ್ಪ ಕಾಲೇಜಿನಲ್ಲಿ ಕೋವಿಡ್ ತಪಾಸಣಾ ಶಿಬಿರ






ದಾವಣಗೆರೆ, ಏ. 4- ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಯೋಗದಲ್ಲಿ ಶ್ರೀಮತಿ ಪುಷ್ಪಾ ಶಾಮನೂರು ಮಹಾಲಿಂಗಪ್ಪ ಶಾಲೆ ಹಾಗೂ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರ ಕೋವಿಡ್ ತಪಾಸಣಾ ಶಿಬಿರವನ್ನು ಮೂರು ದಿನಗಳ ಕಾಲ ನಡೆಸಲಾಯಿತು.

ಕ್ಷೇತ್ರ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ನಾಯ್ಕ್, ಶಿಕ್ಷಣ ಸಂಯೋಜಕ ಹಾಗೂ ನೋಡಲ್ ಅಧಿಕಾರಿ ಶ್ರೀನಿವಾಸ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ಗಾಯತ್ರಿ, ಉಮಾಪತಿ, ಪ್ರಾಂಶುಪಾಲರಾದ ಎಂ.ಎಸ್. ಮಲ್ಲಿಕಾರ್ಜುನಯ್ಯ ಮತ್ತು ಸಿಲ್ವಿ ಜೋಸ್ ಹಾಗೂ ಆರೋಗ್ಯ ಸಿಬ್ಬಂದಿಗಳು ಹಾಗೂ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

### ವಿರೂಪಾಕ್ಷಪ್ಪ ಮುದ್ದಿ ನಿಧನ



ದಾವಣಗೆರೆ ದೇವಾಂಗಪೇಟೆ ವಾಸಿ ಸ್ಫೂರ್ತಿ ಕ್ರಿಯೇಷನ್ಸ್ ಹಾಗೂ ಸ್ಫೂರ್ತಿ ಗಾರ್ಮೆಂಟ್ಸ್ ಮಾಲೀಕರಾದ ವಿರೂಪಾಕ್ಷಪ್ಪ ಮುದ್ದಿ (80) ಅವರು ದಿನಾಂಕ 4.4.2021ರ ಭಾನುವಾರ ಸಂಜೆ 6 ಗಂಟೆಗೆ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಮೂವರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.4.2021ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ರುದ್ರಭೂಮಿಯಲ್ಲಿ ನೆರವೇರಲಿದೆ.

## ಅಕ್ರಮ ಮಾರಾಟ: 2 ಲಕ್ಷಕ್ಕೂ ಅಧಿಕ ಮೌಲ್ಯದ ಗಾಂಜಾ ವಶ



ದಾವಣಗೆರೆ, ಏ.4- ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಅಂತರ್ ರಾಜ್ಯ ಆರೋಪಿತರನ್ನು ಬಂಧಿಸಿರುವ ಇಲ್ಲಿನ ಸಿಇಎನ್ ಅಪರಾಧ ಪೊಲೀಸರು 2 ಲಕ್ಷ 10 ಸಾವಿರ ಮೌಲ್ಯದ 8 ಕೆ.ಜಿ. 600 ಗ್ರಾಂ ಗಾಂಜಾ, ಮೊಬೈಲ್, 900 ನಗದು ವಶಪಡಿಸಿಕೊಂಡಿದ್ದಾರೆ.

ಎಸ್ಪಿ ಹನುಮಂತರಾಯ ಮತ್ತು ಎಎಸ್ಪಿ ಎಂ. ರಾಜೀವ್ ಮಾರ್ಗದರ್ಶನದಲ್ಲಿ ಡಿ.ಸಿ.ಆರ್.ಬಿ. ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ್ ನೇತೃತ್ವದಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಬಿ.ವಿ. ಗಿರೀಶ್ ಮತ್ತು ಸಿಬ್ಬಂದಿಗಳಾದ ಲೋಹಿತ್, ಮಲ್ಲಿಕಾರ್ಜುನ, ಗೋವಿಂದ್ ರಾಜ್, ಕೊಟ್ರೇಶ್, ನಾಗರಾಜ್, ದ್ಯಾಮೇಶ್ ಒಳಗೊಂಡ ತಂಡವು ಇಂದು ನಗರದ ಬಾಡಾ ಕ್ರಾಸ್ ಹತ್ತಿರದ ಪದ್ಮಶ್ರೀ ಚಿಂದೋಡಿ ಲೀಲಾ ರಂಗಲೋಕದ ಹಿಂಭಾಗದ ರಾಷ್ಟ್ರೀಯ ಹೆದ್ದಾರಿ-48ರ ಸರ್ವೀಸ್ ರಸ್ತೆಯ ಪಕ್ಕದ ಮಣ್ಣಿನ ರಸ್ತೆಯಲ್ಲಿ ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದಾಗ ದಾಳಿ ಮಾಡಿದೆ.

ಛತ್ತಿಸ್‌ಗಡ ರಾಜ್ಯದ ಬಗುಡೇಗಾ ಗ್ರಾಮದ ಅಂತರಾಮ್ ತಿರ್ಕಿ (21), ಬಳ್ಳಾರಿ ಜಿಲ್ಲೆಯ ಬಂಡೆಬಸಾಪುರ ಗ್ರಾಮದ ಮಧುರಾಜ್ ಅಲಿಯಾಸ್ ಮಧುನಾಯ್ಕ್ ಬಂಧಿತರು. ಗೋವಾದ ಕೋಲ್ವಾ ಬೀಚ್ ಹತ್ತಿರ ವಾಸಿ ಅನಿಲ್ ಜೇಕಬ್ ಈತನ ಪತ್ತೆ ಕಾರ್ಯ ಮುಂದುವರೆದಿದೆ.

ಈ ಬಗ್ಗೆ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಭದ್ರತಾ ಸಿಬ್ಬಂದಿ ಮೇಲೆ 400 ಮಾವೋಗಳ ದಾಳಿ

**(1ನೇ ಪುಟದಿಂದ)** ಗೇರಿಲ್ಲಾ ಆರ್ಮಿ ಎಂಬ ತಂಡದ ನೇತೃತ್ವದಲ್ಲಿ ಭದ್ರತಾ ಸಿಬ್ಬಂದಿ ಮೇಲೆ ದಾಳಿ ನಡೆಸಿದ್ದಾರೆ. ದುರ್ಗಮ ಪ್ರದೇಶ, ದಟ್ಟ ಅರಣ್ಯ ಹಾಗೂ ಭದ್ರತಾ ಶಿಬಿರಗಳು ಸಂಖ್ಯೆ ಕಡಿಮೆ ಇದ್ದುದರಿಂದ ನಕ್ಸಲರು ದಾಳಿ ನಡೆಸಿದ್ದಾರೆ ಎಂದು ಶಂಕಿಸಲಾಗಿದೆ.

ಹಗುರ ಮಷಿನ್ ಗನ್ ಬಳಸಿ ದಾಳಿ ನಡೆಸಿದ್ದ ಮಾವೋಗಳು, ಸುಧಾರಿತ ಲಘು ತೀವ್ರತೆಯ ಸ್ಫೋಟಕಗಳನ್ನೂ ಬಳಸಿದ್ದರು. ಶನಿವಾರ ನಡೆದ ದಾಳಿ ಸಂಜೆಯವರೆಗೂ ಮುಂದುವರೆದಿತ್ತು. ಈ ಕಾರ್ಯಾಚರಣೆಯಲ್ಲಿ 10-12 ಮಾವೋಗಳು ಹತರಾಗಿದ್ದಾರೆ ಎಂದು ಶಂಕಿಸಲಾಗಿದೆ.

ನಕ್ಸಲರು ಜಮಾ ಆಗಿರುವ ಮಾಹಿತಿ ಸಿಕ್ಕ ನಂತರ ಭದ್ರತಾ ಸಿಬ್ಬಂದಿ ಅಲ್ಲಿಗೆ ಕಾರ್ಯಾಚರಣೆಗೆ ತೆರಳಿತ್ತು. ಈ ಸಂದರ್ಭದಲ್ಲಿ ಭದ್ರತಾ ಸಿಬ್ಬಂದಿಯನ್ನು ಸುತ್ತುವರಿದ ನಕ್ಸಲರು, ತೀವ್ರ ದಾಳಿ ನಡೆಸಿದರು. ಅರಣ್ಯ ಪ್ರದೇಶವಾದ ಕಾರಣ ಭದ್ರತಾ ಸಿಬ್ಬಂದಿಗೆ ಹೆಚ್ಚಿನ ಅವಕಾಶ ಸಿಗಲಿಲ್ಲ ಎಂದು ಮೂಲಗಳು ಹೇಳಿವೆ.

ದಾಳಿಯಲ್ಲಿ 22 ಭದ್ರತಾ ಸಿಬ್ಬಂದಿ ಹತರಾಗಿದ್ದಾರೆ. ಇವರಲ್ಲಿ ಎಂಟು ಜನರು ಸಿಆರ್‌ಪಿಎಫ್‌ಗೆ ಸೇರಿದವರು ಹಾಗೂ ಏಳು ಕೋಬ್ರಾ ಕಮಾಂಡೋದವರು ಮತ್ತು ಒಬ್ಬರು ಬಸ್ತರಿಯಾ ಬೆಟಾಲಿಯನ್‌ಗೆ ಸೇರಿದವರು. ಸಿಆರ್‌ಪಿಎಫ್ ಇನ್ಸ್‌ಪೆಕ್ಟರ್ ಒಬ್ಬರು ಈಗಲೂ ಕಾಣೆಯಾಗಿದ್ದಾರೆ.

# ಕನ್ನಡ ರಂಗಭೂಮಿ : ದಾವಣಗೆರೆ ವಿವಿಯಲ್ಲಿ ವಿಚಾರ ಸಂಕಿರಣ



ದಾವಣಗೆರೆ, ಏ.4- ದಾವಣಗೆರೆ ವಿಶ್ವವಿದ್ಯಾನಿಲಯದ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಚಿತ್ರದುರ್ಗ ಮತ್ತು ಕನ್ನಡ ಭಾಷಾಧ್ಯಯನ ವಿಭಾಗ ಹಾಗೂ ಶ್ರೀರಂಗ ದತ್ತಿನಿಧಿ, ಕನ್ನಡ ವಿವಿ ಹಂಪಿ ಇವುಗಳ ಸಹಯೋಗದಲ್ಲಿ ಕನ್ನಡ ರಂಗಭೂಮಿ ಮತ್ತು ಭಾಷೆ ಕುರಿತ ಒಂದು ದಿನದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

ಹಂಪಿ ವಿವಿ ಕುಲಪತಿ ಪ್ರೊ. ಸ.ಚಿ. ರಮೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಸಮೂಹ ಮಾಧ್ಯಮಗಳ ಪ್ರಭಾವದಿಂದಾಗಿ ರಂಗಭೂಮಿ ಕಲೆಗಳು ಸೊರಗುತ್ತಿವೆ. ಸಾಂಸ್ಕೃತಿಕ ಕಲೆಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆಯುವ ಜರೂರಿದೆ ಎಂದರು.

ದಾವಣಗೆರೆ ವಿವಿ ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ರಂಗಭೂಮಿ ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು. ಇದು ಮನರಂಜನೆಗಾಗಿ ಉದಯವಾದರೂ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಸದಾ ಜೀವಂತವಾಗಿಡುವಲ್ಲಿ ಮುಖ್ಯವಾಗಿದೆ. ವಿದ್ಯಾರ್ಥಿಗಳಿಗೆ ರಂಗ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು.

ವೃತ್ತಿ ರಂಗಭೂಮಿ ಮತ್ತು ಭಾಷೆ ವಿಷಯ ಕುರಿತು ಪ್ರೊ. ರಾಜಪ್ಪ ದಳವಾಯಿ ಪ್ರಬಂಧ ಮಂಡಿಸಿದರು. ಡಾ. ಕೆ. ನಾರಾಯಣಸ್ವಾಮಿ, ರೂಪೇಶ್ ಕುಮಾರ್, ಡಾ. ಎಚ್.ಜಿ. ವಿಜಯಕುಮಾರ್ ವಿಷಯ ವಿಸ್ತರಣೆ ಮಾಡಿದರು. ಎರಡನೇ ಗೋಷ್ಠಿಯಲ್ಲಿ ಹವ್ಯಾಸಿ ರಂಗಭೂಮಿ ಮತ್ತು ಭಾಷೆ ವಿಷಯದ ಕುರಿತು ವಿಮರ್ಶಕ ಡಾ. ಕೆ.ವೈ. ನಾರಾಯಣಸ್ವಾಮಿ ಪ್ರಬಂಧ ಮಂಡಿಸಿದರು. ಡಾ. ಕೆ. ಮಲ್ಲಿಕಾರ್ಜುನ, ಡಾ. ವಿ. ಜಯರಾಮಯ್ಯ, ಜೋಶಿ, ಡಾ. ಬಿ. ಬಸವರಾಜ್, ಡಾ. ಮಹಾಂತೇಶ ಪಾಟೀಲ, ಡಾ. ಹೆಚ್.ವಿ. ಶಾಂತರಾಜು, ಎಚ್.ಆರ್. ಮದಕರಿನಾಯಕ ಸಂವಾದ ನಡೆಸಿದರು.

ಕಾರ್ಯಕ್ರಮದಲ್ಲಿ ವಿವಿಯ ನಿಕಾಯದ ಡೀನ್ ಪ್ರೊ. ಕೆ.ಬಿ. ರಂಗಪ್ಪ, ಹಂಪಿ ಕನ್ನಡ ವಿವಿ ಭಾಷಾಧ್ಯಯನ ವಿಭಾಗದ ಮುಖ್ಯಸ್ಥ ಡಾ. ಪಾಂಡುರಂಗ ಬಾಬು ಉಪಸ್ಥಿತರಿದ್ದರು. ವಿವಿಯ ಚಿತ್ರದುರ್ಗ ಸ್ನಾತಕೋತ್ತರ ಕೇಂದ್ರದ ಸಂಯೋಜನಾಧಿಕಾರಿ ಡಾ. ಹೆಚ್. ವಿಶ್ವನಾಥ್ ಸ್ವಾಗತಿಸಿದರು. ಶ್ರೀರಂಗ ದತ್ತಿನಿಧಿಯ ಸಂಚಾಲಕ ಡಾ. ಅಶೋಕ್ ರಂಜೇರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಡಾ. ಭೀಮಾಶಂಕರ ಜೋಷಿ ನಿರೂಪಿಸಿದರು. ಕಾರ್ಯಕ್ರಮ ಸಂಯೋಜಕ ಆರ್. ರೂಪೇಶ್ ಕುಮಾರ್ ವಂದಿಸಿದರು.

# ಜನಪದದ ಆಚರಣೆಗಳಿಗೂ ವೈಜ್ಞಾನಿಕ ಹಿನ್ನೆಲೆ ಇದೆ

## 'ಗೀಗೀ ಪದ ಜಾನಪದ ಮಾಧ್ಯಮದ ಮೂಲಕ ವಿಜ್ಞಾನ' ಸಂವಹನ ಕಾರ್ಯಾಗಾರದಲ್ಲಿ ಎಂ.ಜಿ. ಈಶ್ವರಪ್ಪ ಅಭಿಮತ




ದಾವಣಗೆರೆ, ಏ.4- ವೈಜ್ಞಾನಿಕ ಮನೋಭಾವ ಎಲ್ಲಿ ಇರುತ್ತದೆಯೋ ಅಲ್ಲಿ ಸರಿ ಎನಿಸಿದರಷ್ಟೇ ಒಪ್ಪಿಕೊಳ್ಳುತ್ತೇವೆ. ಆದರೆ ಜನಪದ ಆಚರಣೆಗಳಿಗೂ ವೈಜ್ಞಾನಿಕ ಹಿನ್ನೆಲೆ ಇದೆ ಎಂದು ಜಾನಪದ ವಿದ್ವಾಂಸ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಭಾರತ ಸರ್ಕಾರ, ವಿಕಸನ ಕೇಂದ್ರ ಬೆಳಗಾವಿ, ವಿಜ್ಞಾನ ಕೇಂದ್ರ ದಾವಣಗೆರೆ, ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದ ಐಕ್ಯೂಎಸಿ ಘಟಕ ಸಂಯುಕ್ತವಾಗಿ ಏರ್ಪಡಿಸಿದ್ದ 'ಗೀ ಗೀ ಪದ ಜಾನಪದ ಮಾಧ್ಯಮದ ಮೂಲಕ ವಿಜ್ಞಾನ' ಸಂವಹನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ನಂಬಿಕೆ, ಮೂಢನಂಬಿಕೆಗಳಲ್ಲಿ ಜನಪದ ಮಾಧ್ಯಮದ ಮೂಲಕ ವಿಜ್ಞಾನ ಸಂವಹನ ಸಾಧ್ಯವೇ ಎಂಬ ಜಿಜ್ಞಾಸೆ ಕಾಡುತ್ತದೆ ಎಂದರು.

ಸಾಹಿತ್ಯವನ್ನು ಜನಪದವಾಗಿ ಹೇಳುವುದು ಸುಲಭ. ವಿಜ್ಞಾನವನ್ನು ಜನಪದ ಮಾಧ್ಯಮದ ಮೂಲಕ ಸಂವಹನ ನಡೆಸಿದರೆ, ಅದರ ಗಂಭೀರತೆ ಕಳೆದುಕೊಳ್ಳದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸಿದರು.

ವಿಜ್ಞಾನ ಬುದ್ಧಿಗೆ ಸಂಬಂಧಿಸಿದರೆ, ಸಾಹಿತ್ಯ ಹೃದಯಕ್ಕೆ ಸಂಬಂಧಿಸಿದೆ ಎಂದು ಹೇಳಿದರು.

ವಿಜ್ಞಾನ ಪರಿವೀಕ್ಷಕ ಡಾ. ಲಿಂಗರಾಜ ರಾಮಾಪುರ ಮಾತನಾಡಿ, ಹಳ್ಳಿಗರ, ಶ್ರಮಿಕರ, ಕೃಷಿಕರ, ಮಹಿಳೆಯರ ಹಾಗು ಶೋಷಿತರ ಮಧ್ಯೆ ವಿಜ್ಞಾನವನ್ನು ಕೊಂಡೊಯ್ಯುವ ಸರಳ ಮಾಧ್ಯಮ ಜನಪರ ಮಾಧ್ಯಮ ಎಂದರು.

ಬಾಪೂಜಿ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎಂ.ಸಿ. ಕೌಶಿಕ್ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯಾದಂತೆ ಅದರ ತಳಹದಿಯನ್ನು ಮರೆಯುತ್ತಿದ್ದೇವೆ ಎಂದರು.

ವಿಜ್ಞಾನ ಜನರ ಹಸಿವು, ಬಡತನ, ಆರೋಗ್ಯ ನೀಗಿಸಲು ಬೇಕಾದ ಸಂಶೋಧನೆ ನಡೆಸಿದರೆ, ತಂತ್ರಜ್ಞಾನ ಅದರ ಪೂರೈಕೆಗೆ ನೆರವಾಗುತ್ತದೆ. ಜನಪದ ಮಾಧ್ಯಮದ ಮೂಲಕ ವಿಜ್ಞಾನವನ್ನು ಹೆಚ್ಚು ಪ್ರಚುರಪಡಿಸುವ ಅಗತ್ಯವಿದೆ ಎಂದು ಹೇಳಿದರು.

ಶಿವಮೊಗ್ಗದ ಡಾ. ಬಸವರಾಜ್ ಮಾತನಾಡಿ, ಜನಪರ ಉಡುಗೆಗಳು, ಜೀವನ ಕಲೆ, ಆಹಾರ ಪದ್ಧತಿ ಎಲ್ಲವೂ ಸಮ್ಮಿಲನವಾಗಿ ಅಧ್ಯಯನ ಮಾಡಿ ನೋಡಿದರೆ, ಅದರಲ್ಲೂ ವಿಜ್ಞಾನವಿರುವುದು ತಿಳಿಯುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಬುದ್ಧಿ ಮತ್ತು ಹೃದಯಕ್ಕೆ ಹತ್ತಿರವಾದ ರೀತಿಯಲ್ಲಿ ಮಗುವಿಗೆ ಶಿಕ್ಷಣ ಕೊಡಬೇಕೆಂದು ಸಲಹೆ ನೀಡಿದರು.

ವಿಕಸನ ಕೇಂದ್ರದ ಸಂಜಯ್ ಮುಗ್ದುಮ್, ಎಂ. ದಾದಾಪೀರ್, ಹೆಚ್.ಎಂ. ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ಗದಗ ಜಿಲ್ಲೆ ಜನಪದ ಕಲಾವಿದ ವೀರಣ್ಣ ಅಂಗಡಿ ಮತ್ತು ಸಂಗಡಿಗರು ಆಶಯಗೀತೆ ಹಾಡಿದರು.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಸ್ವಾಗತಿಸಿದರು. ಉಪನ್ಯಾಸಕಿ ಎ.ಹೆಚ್. ಸುಗ್ಗಾದೇವಿ ನಿರೂಪಿಸಿದರು. ಶಿಕ್ಷಕ ದೊಡ್ಡಮನಿ ಕೆಂಚಪ್ಪ ವಂದಿಸಿದರು.

# ವಿಶ್ವಾಸದಿಂದ ಲಸಿಕೆ ಹಾಕಿಸಿಕೊಳ್ಳಿ



ದಾವಣಗೆರೆ, ಏ.4- ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ಜಿ.ಡಿ. ರಾಘವನ್ ಅವರ ಮಾರ್ಗ ದರ್ಶನದಲ್ಲಿ ಕ್ಯಾನ್ಸರ್ ಮುಕ್ತ ಇಂಜಿನಿಯರ್, ಕಲಾವಿದ ಅರುಣ್ ಕುಮಾರ್ ಆರ್.ಟಿ ನಗರದ ಸಿ.ಜಿ. ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಸಿ.ಜಿ. ಆಸ್ಪತ್ರೆಯ ಡಾ. ಸಿದ್ಧರಾಮೇಶ್ ಮೇಲ್ವಿಚಾರಣೆಯಲ್ಲಿ ಹಿರಿಯ ಶುಶ್ರೂಷಕರಾದ ಶ್ರೀಮತಿ ಜಯಮ್ಮ ಹಾಗೂ ಶ್ರೀಮತಿ ತ್ರಿವೇಣಿಯವರು ಹೆಸರು ನೋಂದಾಯಿಸಿಕೊಂಡು ಯಶಸ್ವಿಯಾಗಿ ಲಸಿಕೆ ಚುಚ್ಚುಮದ್ದು ನೀಡಿದರು. ಲಸಿಕೆ ಪಡೆದ ಅನುಭವವನ್ನು ಪತ್ರಿಕೆಯೊಂದಿಗೆ ಹಂಚಿಕೊಂಡ ಆರ್.ಟಿ. ಲಸಿಕೆ ಪಡೆಯುವ ಮುನ್ನ ಸ್ವಲ್ಪ ವಿಚಲಿತನಾಗಿದ್ದರೂ ಡಾ. ರಾಘವನ್ ತುಂಬಿದ ಧೈರ್ಯದಿಂದ ವಿಶ್ವಾಸದೊಂದಿಗೆ ಚುಚ್ಚುಮದ್ದು ತೆಗೆದುಕೊಂಡೆ.

ನನಗೆ ಯಾವುದೇ ರೀತಿಯ ನೋವು-ತೊಂದರೆ ಕಾಣಿಸಿಕೊಳ್ಳಲಿಲ್ಲ. ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ಜಾಹೀರಾತೊಂದರ ಫೋಟೋ ಶೂಟ್ ನಲ್ಲಿ ಭಾಗವಹಿಸಿದೆ. ನಿಜಕ್ಕೂ ಸರಕಾರ, ವೈದ್ಯಕೀಯ ಸಿಬ್ಬಂದಿಗಳು ಕೋವಿಡ್ ನಿಂದ ಜನರನ್ನು ರಕ್ಷಿಸಲು ತೋರಿಸುತ್ತಿರುವ ಕಾಳಜಿ ಮೆಚ್ಚುವಂತಹದ್ದು. ಅವರ ಕಳಕಳಿಗೆ ಸಾರ್ವಜನಿಕರು ಸಕಾರಾತ್ಮಕವಾಗಿ ಸ್ಪಂದಿಸಬೇಕಿದೆ. ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ವಿಶ್ವಾಸದಿಂದ ಕೋವಿಡ್ ಲಸಿಕೆ ಪಡೆದು ಜನರು ಜವಾಬ್ದಾರಿ ನಿಭಾಯಿ ಸುತ್ತಾರೆಂಬ ನಂಬಿಕೆ ನನಗಿದೆ ಎಂದು ಅರುಣ್ ಭರವಸೆಯಿಂದ ನುಡಿಯುತ್ತಾರೆ.

# ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಪಟ್ಟಿ ಅನುಮೋದನೆ

ದಾವಣಗೆರೆ, ಏ.4- ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಜಿಲ್ಲಾ ಮಟ್ಟದ ಸಮೀಕ್ಷಾ ಸಮಿತಿಯಲ್ಲಿ 14 ಜನರು ಗ್ರಾಮೀಣ ಪ್ರದೇಶಕ್ಕೆ ಮತ್ತು 8 ಜನರು ನಗರ ಪ್ರದೇಶಕ್ಕೆ ಸೇರಿದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಪಟ್ಟಿಯನ್ನು ಅನುಮೋದಿಸಲಾಗಿದೆ.

ಮಾ.22 ರಂದು ನಡೆದ ಜಿಲ್ಲಾ ಮಟ್ಟದ ಸಮೀಕ್ಷಾ ಸಮಿತಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗುರ್ತಿಸಲ್ಪಟ್ಟ ಸ್ವಯಂ ಘೋಷಿತ 22 ಜನರ ಪಟ್ಟಿಯ ಪೈಕಿ 14 ಜನ ಗ್ರಾಮೀಣ ಪ್ರದೇಶ ವ್ಯಾಪ್ತಿಗೆ ಹಾಗೂ ಹೆಚ್. ಕಡದಕಟ್ಟೆ ಗ್ರಾ. ಪಂ., ಪುರಸಭೆ ವ್ಯಾಪ್ತಿಗೆ ಸೇರಿರುವುದರಿಂದ ದೇವನಾಯಕನಹಳ್ಳಿಯ 8 ಜನರನ್ನು ನಗರ ಪ್ರದೇಶ ವ್ಯಾಪ್ತಿಗೆ ವರ್ಗಾಯಿಸಿ, ಪಟ್ಟಿ ಅನುಮೋದಿಸಲಾಗಿದೆ.

# ಶ್ಯಾಗಲೆ ಆಂಜನೇಯ ದೇವಸ್ಥಾನಕ್ಕೆ ಅನುದಾನ



ದಾವಣಗೆರೆ, ಏ.4- ತಾಲ್ಲೂಕಿನ ಲೋಕಿಕೆರೆ ವಲಯದ ಶ್ಯಾಗಲೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಮಂಜೂರಾದ 2 ಲಕ್ಷ ಅನುದಾನವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಒಕ್ಕೂಟದಿಂದ ದೇವಸ್ಥಾನದ ಕಮಿಟಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ನಿರ್ದೇಶಕ ಜಯಂತ್ ಪೂಜಾರಿ, ತಾಲ್ಲೂಕಿನ ಯೋಜನಾಧಿಕಾರಿ ಬಾಬು ಸೇರಿದಂತೆ ಮೇಲ್ವಿಚಾರಕರು, ಸೇವಾ ಪ್ರತಿನಿಧಿಗಳು, ಒಕ್ಕೂಟದ ಪದಾಧಿಕಾರಿಗಳು ಇದ್ದರು.

# ದೂಡಾ ನಿವೃತ್ತ ನೌಕರರಿಗೆ ಬೀಳ್ಕೊಡುಗೆ



ದಾವಣಗೆರೆ, ಏ.4- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ನೌಕರರಾದ ಎರಡನೇ ದರ್ಜೆ ಸಹಾಯಕ ಡಿ. ಮಂಜುನಾಥ್ ಹಾಗೂ ವರ್ಕ್ ಇನ್ಸ್‌ಪೆಕ್ಟರ್ ಹೆಚ್. ಗುರುಸಿದ್ದಪ್ಪ ವಯೋನಿವೃತ್ತಿ ಹೊಂದಿದ್ದು, ಇವರನ್ನು ಪ್ರಾಧಿಕಾರದ ವತಿಯಿಂದ ಬೀಳ್ಕೊಡಲಾಯಿತು. ಈ ಸಂದರ್ಭದಲ್ಲಿ ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸದಸ್ಯ ಡಿ.ವಿ. ಜಯರುದ್ರಪ್ಪ, ನಗರ ಯೋಜನಾ ಸದಸ್ಯ ಎಂ. ಅಣ್ಣಪ್ಪ, ಸಹಾಯಕ ನಿರ್ದೇಶಕ ಬಿ. ರೇಣುಕಾಪ್ರಸಾದ್, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ.ಹೆಚ್. ಶ್ರೀಕರ ಮತ್ತಿತರರು ಉಪಸ್ಥಿತರಿದ್ದರು.

# ಕುಡಿಯುವ ನೀರಿಗೆ ಸಮಸ್ಯೆ ಆಗದಂತೆ ಮುಂಜಾಗ್ರತಾ ಕ್ರಮ



**ಹರಪನಹಳ್ಳಿಯಲ್ಲಿ ಎಸ್.ವಿ.ಆರ್**

ಹರಪನಹಳ್ಳಿ, ಏ.4- ಬೇಸಿಗೆಯಲ್ಲಿ ಕ್ಷೇತ್ರದ ಯಾವುದೇ ಭಾಗದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ಸಮೀಪದ ಕೋಣನಕಟ್ಟೆ ಗ್ರಾಮದಲ್ಲಿ ಶುಕ್ರವಾರ ನೂತನ ಕೊಳವೆ ಬಾವಿಗೆ ನೀರು ಹರಿಸಿ ಅವರು ಮಾತನಾಡಿದರು.

ದಶಕಗಳಿಂದ ಸಮರ್ಪಕ ಮಳೆಗಾಲ ಇಲ್ಲದೆ ಕ್ಷೇತ್ರದ ಜನ-ಜಾನುವಾರುಗಳು ಪರಿತಪಿಸುವಂತಾಗಿತ್ತು. ಆದರೆ ಕಾಲ ಬದಲಾಗಿದ್ದು ಜೂನ್ ತಿಂಗಳ ಒಳಗೆ ಕ್ಷೇತ್ರ ಸಮೃದ್ಧ ನೀರಾವರಿಯಿಂದ ಕೂಡಿರುವ ದಿನಗಳು ಸನ್ನಿಹಿತವಾಗಲಿವೆ ಎಂದರು. ಇದಕ್ಕೂ ಮೊದಲು ಗ್ರಾಮದಲ್ಲಿ ಆಯೋಜಿಸಿದ್ದ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಭಾಗವಹಿಸಿ, ಶ್ರೀಮಂತರಿಗೆ ಸೀಮಿತವಾಗಿದ್ದ ಕ್ರಿಕೆಟ್ ಈಗ ಹಳ್ಳಿಗಳಿಗೂ ವ್ಯಾಪಿಸಿರುವುದು ಕ್ರೀಡಾಪಟುಗಳ ಉಗಮದ ವೇದಿಕೆಯಾಗಿದೆ ಎಂದು ತಿಳಿಸಿದರು.

ಜಿ.ಪಂ ಸದಸ್ಯ ಅಂಜಿನಪ್ಪ, ಮುಖಂಡರಾದ ಬಾಲೇನಹಳ್ಳಿ ಕೆಂಚನಗೌಡ, ಫಣಿಯಾಪುರ ಲಿಂಗರಾಜ, ಅಣ್ಣಪ್ಪ, ಟಿ.ಸುರೇಶ್, ಶ್ರೀನಿವಾಸ, ಪಾಂಡುರಂಗ, ನಾಗರಾಜ್, ಮಂಜುನಾಥ್, ಕೆ. ತಿರುಪತಿ, ಷಣ್ಮುಖಪ್ಪ, ಪರಶುರಾಮ, ಹಾಲಪ್ಪ ಮತ್ತಿತರರು ಇದ್ದರು.

# ಜಿಗಳಿ : ಪುಣ್ಯಾನಂದ ಪುರಿ ಶ್ರೀಗಳ ಪುಣ್ಯಾರಾಧನೆ



ಮಲೇಬೆನ್ನೂರು, ಏ.4- ಜಿಗಳಿ ಗ್ರಾಮದ ವಾಲ್ಮೀಕಿ ವೃತ್ತದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಥಮ ಗುರುಗಳಾದ ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿ ಅವರ 14ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮವನ್ನು ಶನಿವಾರ ಸಂಜೆ ನಡೆಸಲಾಯಿತು.

ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಗ್ರಾಮದ ಮುಖಂಡರು, ಶ್ರೀಗಳು ಸಮುದಾಯದ ಮಹಾಬೆಳಕು ಎಂದು ಸ್ಮರಿಸಿದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ದೇವೇಂದ್ರಪ್ಪ, ನಿಟ್ಟೂರಿನ ಮುಖಂಡ ಕೆ.ಸಂಜೀವಮೂರ್ತಿ, ಗ್ರಾಮದ ಕೆ.ನಂದಿಬಸಪ್ಪ, ಕೆ.ಷಣ್ಮುಖಪ್ಪ, ಕೆ.ಈರಣ್ಣ, ಗ್ರಾ.ಪಂ. ಸದಸ್ಯರಾದ ಕೆ.ಜಿ.ಬಸವರಾಜ್, ವೈ.ಆರ್. ಚೇತನ್‌ಕುಮಾರ್, ಜಿ.ಆರ್.ಹಾಲೇಶ್‌ಕುಮಾರ್, ಮಾಕನೂರು ಶಿವು, ಮುಖಂಡರಾದ ಕೆ.ಎಸ್.ನಂದ್ಯೆಪ್ಪ, ಕೆ.ಎಂ.ರಾಮಪ್ಪ, ಕೆ.ಆರ್.ಸಿದ್ದವೀರಪ್ಪ, ಬಿ. ಸೋಮಶೇಖರ ಚಾರಿ, ಬಿ.ನಿಂಗಾಚಾರಿ, ಭೋವಿ ಮಂಜಪ್ಪ, ಕಮದೋಡ ಬಸಪ್ಪ, ಹಾಲಿವಾಣದ ಚಂದ್ರಪ್ಪ, ಪುಟ್ಟಣ್ಣರ ಬಸವರಾಜ್, ಶಿಕ್ಷಕ ಜಿ.ಆರ್. ನಾಗರಾಜ್, ಉಪನ್ಯಾಸಕ ಕೆ.ಎನ್.ಮಂಜುನಾಥ್, ಪತ್ರಕರ್ತ ಪ್ರಕಾಶ್, ಗ್ರಾ.ಪಂ. ಬಿಲ್ ಕಲೆಕ್ಟರ್ ಬಿ. ಮೌನೇಶ್, ಹೆಚ್.ಬಿ.ವೀರೇಶ್, ಬೆಣ್ಣೇರ ನಂದ್ಯೆಪ್ಪ, ಪಾಳ್ಯದರ ನಂದಿಬಸಪ್ಪ, ದಡದಿ ನಾಗಣ್ಣ, ವಿಶ್ವ, ಬಾರಿಕೆರೆ ಉಮೇಶ್, ಚಾಮರಾಜ ಸೇರಿದಂತೆ ಇನ್ನೂ ಅನೇಕರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಲಿಂಗೈಕ್ಯ ಶ್ರೀಗಳಿಗೆ ಪೂಜೆ ಸಲ್ಲಿಸಿದರು.

# ಇಂದು ಪರೀಕ್ಷಾ ಪೂರ್ವ ಸಿದ್ಧತಾ ಕಾರ್ಯಾಗಾರ

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ಆಶ್ರಯದಲ್ಲಿ ಇಂದು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗೆ ಪರೀಕ್ಷಾ ಪೂರ್ವ ಸಿದ್ಧತಾ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಕಾಲೇಜಿನ ಸಭಾಂಗಣದಲ್ಲಿ ಬೆಳಿಗ್ಗೆ 10.30 ಕ್ಕೆ ನಡೆಯುವ ಕಾರ್ಯಕ್ರಮವನ್ನು ಬಿ.ಸಿ. ಶಿವಕುಮಾರ್ ಅವರು ಉದ್ಘಾಟಿಸಿ, ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಜಯಂತ್ ಡಿ.ಎಸ್., ಗುರುಪ್ರಸಾದ್ ಕೆ.ಜೆ ಭಾಗವಹಿಸುವರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ. ಕೆ. ಷಣ್ಮುಖ ಉಪಸ್ಥಿತರಿರುವರು.

# ಹಡಗಲಿ: ಕೊರೊನಾದಿಂದ ಸಂಭ್ರಮವಿಲ್ಲದ ಉರುಸು



ಹೂವಿನಹಡಗಲಿ, ಏ.4- ಹಿಂದೂ-ಮುಸ್ಲಿಂ ಬಾಂಧವರ ಸಾಮರಸ್ಯದ ಪ್ರತೀಕವಾಗಿ ಆಚರಣೆಗೊಳ್ಳುತ್ತಿರುವ ರಾಜಾಬಾಗ್ ಯಮನೂರು ಸ್ವಾಮಿ ಉರುಸು ಕಾರ್ಯಕ್ರಮಕ್ಕೆ ಇಂದು ಅಧಿಕೃತ ಚಾಲನೆ ದೊರೆಯಿತು.

ಹಿಂದೂ-ಮುಸ್ಲಿಂ ಸಮಾಜ ಬಾಂಧವರು ಒಟ್ಟಾಗಿ ಸೇರಿ ಆಚರಿಸುವ ಭಾವೈಕ್ಯತೆಯ ಈ ಹಬ್ಬದಲ್ಲಿ ಈ ಬಾರಿ ಕೊರೊನಾ ಸೋಂಕಿನಿಂದ ಸರಳವಾಗಿ ಹಡಗಲಿ ತಾಲ್ಲೂಕಿನ ಭಕ್ತರು ಪಾಲ್ಗೊಂಡಿದ್ದರು.

ಬೆಳಿಗ್ಗೆ ಪಟ್ಟಣದಲ್ಲಿ ಭವ್ಯ ಮೆರವಣಿಗೆ ಮೂಲಕ ಸಾಗಿ ಧಾರ್ಮಿಕ ವಿಧಿ ವಿಧಾನಗಳ ಮೂಲಕ ತರುವ ಪವಿತ್ರ ಗಂಗೆಯಲ್ಲಿ ದೀಪ ಉರಿಸುವ ಪವಾಡ ಕಾರ್ಯಕ್ರಮ ವಿಶೇಷವಾಗಿತ್ತು. ಸವಾಲ್ ಪದಗಳ ಖವ್ವಾಲಿ ಕಾರ್ಯಕ್ರಮ, ರಸಮಂಜರಿ ಕಾರ್ಯಕ್ರಮ, ಟಗರಿನ ಕಾಳಗ ಹಾಗೂ ಸಂಜೆಯ ಜಂಗೀ ಕುಸ್ತಿ ರದ್ದುಪಡಿಸಲಾಗಿದೆ.

# ಪುಟ್ಟಮ್ಮ ಹಿರೇಮಠ ಅವರಿಗೆ ಸನ್ಮಾನ



ಚಿತ್ರದುರ್ಗ, ಏ. 4- ಆರೋಗ್ಯವೇ ಭಾಗ್ಯ ಯುವಕರ ಸಂಘದ ವತಿಯಿಂದ ಕೊಡಿಯಾಲ ಹೊಸಪೇಟೆಯ ಪಬ್ಲಿಕ್ ಹೀರೋ, ವಿಧ್ಯಾವಾರಿಧಿ ಪ್ರಶಸ್ತಿ ಪುರಸ್ಕೃತೆ ಪುಟ್ಟಮ್ಮ ಹಿರೇಮಠ ಅವರನ್ನು ಚಿತ್ರದುರ್ಗದ ಬುರುಜನಹಟ್ಟಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಧಕ ನಿವೇದನ್ ನೆಂಪೆ, ಸುಬ್ರಹ್ಮಣಿ (ಪೋಲಿಸ್ ಇಲಾಖೆಯ ಸರಿಗಮಪ ಹಾಡುಗಾರ), ಶಾಂತಪ್ಪ ಜಡೇಮ್ಮನವರ್ (ಪೋಲೀಸ್ ಸಬ್ ಇನ್ಸ್‌ಪೆಕ್ಟರ್, ಕು. ಲಲಿತಾ.ಆರ್ (ಏರೋ ಇಂಜಿನಿಯರಿಂಗ್ ರಾಜ್ಯಕ್ಕೆ ಪ್ರಥಮ) ಮತ್ತು ಆರೋಗ್ಯವೇ ಭಾಗ್ಯ ಯುವಕರ ಸಂಘದ ಟಿ. ಪರಶುರಾಮ್ ಮತ್ತು ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ ಬಾವಿಕಟ್ಟಿ ಮತ್ತಿತರು ಉಪಸ್ಥಿತರಿದ್ದರು.

# ಹೊನ್ನಾಳಿಯಲ್ಲಿ ಕಾಲ್ನಡಿಗೆ ಜಾಥಾ



ಹೊನ್ನಾಳಿ, ಏ.4- ಆಗಸ್ಟ್ 15 ಕ್ಕೆ ಸ್ವಾತಂತ್ರ್ಯ ಗಳಿಸಿ 75 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ತಾಲ್ಲೂಕು ಆಡಳಿತ 75 ವಾರಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಸಾಂಕೇತಿಕವಾಗಿ ಇಂದು ಬೆಳಿಗ್ಗೆ ಕಾಲ್ನಡಿಗೆ ಜಾಥಾವನ್ನು ಶಾಸಕ ಎಂ.ಪಿ. ರೇಣುಕಾಚಾರ್ಯ ಪ್ರವಾಸಿ ಮಂದಿರದಲ್ಲಿರುವ ಗಾಂಧೀಜಿ ಪ್ರತಿಮೆಗೆ ಹಾರ ಹಾಕುವ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ರೇಣುಕಾಚಾರ್ಯ, ಸ್ವಾತಂತ್ರ ಕೇವಲ ಹೋರಾಟ ಮಾಡಿದ್ದರಿಂದ ಬರಲಿಲ್ಲ. ಹಲವರ ಪ್ರಾಣ ತ್ಯಾಗ, ಬಲಿದಾನಗಳಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿತು ಎಂದರು.

ಐಬಿಯಿಂದ ಜಾಥಾ ನಡೆಸಿ ಸಂಗೊಳ್ಳಿ ರಾಯಣ್ಣ ಪ್ರತಿಮೆ ಬಳಿ ನಡೆದ ಸಭೆಯಲ್ಲಿ ಶಾಸಕ ಬಸವನಗೌಡ ಕೋಟೂರು, ತಾ.ಪಂ. ಇಒ ಗಂಗಾಧರಮೂರ್ತಿ, ಪುರಸಭಾಧ್ಯಕ್ಷ ಕೆ.ವಿ. ಶ್ರೀಧರ್, ಉಪಾಧ್ಯಕ್ಷೆ ರಂಜಿತಾ ಚನ್ನಪ್ಪ ವೊಡ್ಡಿ, ಪುರಸಭಾ ಸದಸ್ಯ ಬಾಬು ಹೋಬಳದರ್, ಸಿಪಿಐ ದೇವರಾಜ್, ಬಿಇಒ ರಾಜೀವ್, ಜಿ.ಪಂ. ಎಇಇ ಅಜ್ಜಪ್ಪ, ತಾಲ್ಲೂಕು ವೈದ್ಯಾಧಿಕಾರಿ ಡಾ. ಕೆಂಚಪ್ಪ, ರವಿಕುಮಾರ್ ಸೇರಿದಂತೆ ಅನೇಕ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

# ಮಲೇಬೆನ್ನೂರು ಪುರಸಭೆಯಿಂದ ನಿರೀಕ್ಷಿತ ಕೆಲಸಗಳಾಗಿಲ್ಲ : ನಜ್ಮಾ



ಪ್ರಗತಿ ಪರಿಶೀಲನಾ ಸಭೆ

ಮಲೇಬೆನ್ನೂರು, ಏ.4 - ಗ್ರಾ.ಪಂ ನಿಂದ ಪುರಸಭೆಯಾಗಿ ಮೇಲ್ದರ್ಜೆಗೇರಿರುವ ಮಲೇಬೆನ್ನೂರು ಪುರಸಭೆ ಅಭಿವೃದ್ಧಿ ಕಾರ್ಯಗಳಲ್ಲಿ ನಿರೀಕ್ಷಿತ ಸಾಧನೆ ಮಾಡಿಲ್ಲ, ಸಾಧನೆ ಶೂನ್ಯವಾಗಿದೆ. ಇದಕ್ಕೆ ಯಾರು ಜವಾಬ್ದಾರರು? ಎಂದು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಶ್ರೀಮತಿ ನಜ್ಮಾ ಪ್ರಶ್ನಿಸಿದರು.

ಅವರು ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ಸ್ವಚ್ಛತೆ, ಶುದ್ದ ಕುಡಿಯುವ ನೀರು, ವಿದ್ಯುತ್ ಸಂಪರ್ಕವನ್ನು ಪುರಸಭೆಯಿಂದ ಜನರು ಬಯಸುತ್ತಾರೆ, ಅವುಗಳನ್ನು ಸರಿಯಾಗಿ ಒದಗಿಸಿದಲ್ಲಿ ಮಾತ್ರ ಜನರಿಂದ ನಿಮಗೆ ಗೌರವ ಸಿಗುತ್ತದೆ. ಆದರೆ ನೀವು ಅದನ್ನೇ ಸರಿಯಾಗಿ ನಿರ್ವಹಿಸಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಮಲೇಬೆನ್ನೂರು ಪುರಸಭೆ ಎಂದರೆ ಸಮಸ್ಯೆಗಳ ಲೇಬಲ್ ಹಾಕಿದ್ದಾರೆ. ಚನ್ನಗಿರಿ ಯಲ್ಲಿ 5, ಜಗಳೂರಿನಲ್ಲಿ 6 ಮತ್ತು ಹೊನ್ನಾ ಳಿಯಲ್ಲಿ 4 ಸಿಬ್ಬಂದಿಗಳು ಮಾತ್ರ ಇದ್ದರೂ ನೂರಕ್ಕೆ ನೂರು ಸುಧಾರಣೆಯಾಗಿದೆ.

ಇಲ್ಲಿ ಸಿಬ್ಬಂದಿಗಳ ಸಂಖ್ಯೆ ಹೆಚ್ಚಿದ್ದರೂ ನಿರೀಕ್ಷಿತ ಪ್ರಗತಿ ಆಗಿಲ್ಲ ಎಂದರು.

ಜಿಲ್ಲಾಧಿಕಾರಿಗಳ ಕೆಲಸದ ವೇಗಕ್ಕೆ ತಕ್ಕಂತೆ ನಾವೂ ಕಾರ್ಯ ನಿರ್ವಹಿಸುತ್ತಿದ್ದೇವೆ. ಪಟ್ಟಣದ ಅಭಿವೃದ್ದಿಗೆ ಕ್ರಿಯಾ ಯೋಜನೆ ಕಳುಹಿಸಿದರೆ ಒಂದೇ ದಿನದಲ್ಲಿ ಅನುಮೋದನೆ ಮಾಡಿಸಿ ಕಳುಹಿಸುತ್ತೇವೆ. ಎಲ್ಲಾ ಸ್ಕೀಂಗಳಲ್ಲೂ ಸಾಕಷ್ಟು ಅನುದಾನ ಇದ್ದರೂ ಅದನ್ನು ಸರಿಯಾಗಿ ಉಪಯೋಗಿಸಿ ಕೊಳ್ಳುತ್ತಿಲ್ಲ.

ಜಿಲ್ಲಾಧಿಕಾರಿಗಳ ಸಭೆಯಲ್ಲಿ ಮಲೇಬೆನ್ನೂರು ಬಗ್ಗೆ ಕೇಳಿದಾಗ ಎಲ್ಲಾ ವಿಭಾಗಗಳಲ್ಲೂ ಸಾಧನೆ ಶೂನ್ಯ ಎಂದು ಹೇಳಲು ನನಗೆ ನಾಚಿಕೆ ಆಗುತ್ತದೆ ಎಂದು ನಜ್ಮಾ ಅವರು ಅಧಿಕಾರಿ, ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡರು.

ಪುರಸಭೆ ಸದಸ್ಯ ಬಿ. ಸುರೇಶ್ ಮಾತನಾಡಿ, ನಮ್ಮ ಪುರಸಭೆಯಲ್ಲಿ ಸಿಬ್ಬಂದಿಗಳ ಸಂಖ್ಯೆ ಹೆಚ್ಚಾಗಿರುವ ಕಾರಣ ಯಾರೂ ಜವಾಬ್ದಾರಿ ತೆಗೆದುಕೊಂಡು ಕೆಲಸ ಮಾಡುತ್ತಿಲ್ಲ. ಸದಸ್ಯರಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ ಎಂದು ದೂರಿದರು. ಘನತ್ಯಾಜ್ಯ ಹಾಕುತ್ತಿರುವ ಜಮೀನಿನ ಸುತ್ತಲೂ ತಗಡಿನ ಬ್ಯಾರಿಕೇಡ್ ನಿರ್ಮಿಸಿಕೊಡುವಂತೆ ಕೇಳಿದರು.

ಬಾಪೂಜಿ ಹಾಲ್ ಸುರಕ್ಷತೆಗಾಗಿ ಸಿಸಿ ಟಿವಿ ಕ್ಯಾಮರಾ ಮತ್ತು ಹೈಮಾಸ್ಟ್ ದೀಪ ಅಳವಡಿಸುವಂತೆ ಒಂದು ವರ್ಷದಿಂದ ಜನ ಕೇಳುತ್ತಿದ್ದಾರೆ. ಇದಕ್ಕೆ ಯಾಕೆ ಪ್ರಸ್ತಾವನೆ ಕಳುಹಿಸಿಲ್ಲ, 14ನೇ ಹಣಕಾಸಿನ ಯೋಜನೆಯಲ್ಲಿ 57.31 ಲಕ್ಷ ರೂ ಉಳಿತಾಯವಾಗಿದ್ದು, ಅದನ್ನು ಏನು ಮಾಡಿದ್ದೀರಿ? ಎಂದು ನಜ್ಮಾ ಅವರು ಅಧಿಕಾರಿಗಳನ್ನು ಪ್ರಶ್ನಿಸಿದರು.

ಈಗ ಅನುಮೋದನೆಯಾಗಿರುವ ಕಾಮ ಗಾರಿಗಳಿಗೆ ಅಲ್ಪಾವಧಿ ಟೆಂಡರ್ ಕರೆಯಿರಿ. ಒಂದು ವಾರದೊಳಗೆ ಯಾವ ಖಾತೆಯಲ್ಲಿ ಉಳಿತಾಯ ಹಣವಿದೆ, ಯಾವ ಟೆಂಡರ್ ಕಾಲ್ ಮಾಡಬೇಕಿದೆ, ಯಾವ ಕೆಲಸ ಆಗಿಲ್ಲ ಎಂಬುದನ್ನು ಮುಖ್ಯಾಧಿಕಾರಿ ಹಾಗು ಅಧ್ಯಕ್ಷರ ಗಮನಕ್ಕೆ ತರಬೇಕು. ಅದನ್ನು ತುರ್ತು ಸಭೆಯಲ್ಲಿಟ್ಟು ನಮ್ಮ ಗಮನಕ್ಕೆ ತರಬೇಕೆಂದು ಇಂಜಿನಿಯರ್ ಮನೋಜ್ ಅವರಿಗೆ ನಜ್ಮಾ ತಾಕೀತು ಮಾಡಿದರು.

ಪುರಸಭೆ ಅಧ್ಯಕ್ಷೆ ಶ್ರೀಮತಿ ಪಾನಿಪುರಿ ರಂಗನಾಥ್ ಅಧ್ಯಕ್ಷತೆ ವಹಿಸಿದ್ದರು. ಸದಸ್ಯರಾದ ದಾದಾವಲಿ ಯುಸೂಫ್, ಎಇಇ ಪ್ರಸನ್ನ, ನೋಡಲ್ ಅಧಿಕಾರಿ ಪ್ರಶಾಂತ್, ಪ್ರಭಾರ ಮುಖ್ಯಾಧಿಕಾರಿ ದಿನಕರ್, ಅಧಿಕಾರಿಗಳಾದ ಉಮೇಶ್, ಗುರುಪ್ರಸಾದ್, ನವೀನ್, ಇಮ್ರಾನ್ ಮತ್ತಿತರರು ಸಭೆಯಲ್ಲಿದ್ದರು.

# ಮತ್ತೆ ಬಂದಿದೆ ಕೋವಿಡ್-19 : ಎಚ್ಚರ...

ಕಳೆದ ವರ್ಷ ರಣಕಹಳೆ ಊದುತ್ತಾ ಬಂದಿದ್ದ ಕೋವಿಡ್-19 ಎಂಬ ಕಾಯಿಲೆ ಮಾನವನ ಮೇಲೆ ಮರಣ ಮೃದಂಗವನ್ನೇ ನುಡಿಸಿತ್ತು. ಅಬ್ಬಬ್ಬಾ ಎಷ್ಟೊಂದು ನರಳಾಟ, ಎಷ್ಟೊಂದು ಸಾವು-ನೋವು, ಆಸ್ಪತ್ರೆಯಲ್ಲಿ ಬೆಡ್ ಸಿಗದೆ, ವೆಂಟಿಲೇಟರ್ ದೊರೆಯದೆ ಸತ್ತವರೆಷ್ಟೋ, ನರಳಿ ನರಳಿ ಸಾವಿನ ದವಡೆಯಿಂದ ಪಾರಾಗಿ ಬಂದವರೆಷ್ಟೋ. ತನ್ನ ಅಟ್ಟಹಾಸದಿಂದ ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮನುಷ್ಯನನ್ನು ಹಿಂಡಿ ಹಿಪ್ಪೆ ಮಾಡಿ ಆತನ ಜಂಘಾಬಲವನ್ನೇ ಕುಗ್ಗಿಸಿದ ಬೀಭತ್ಸ ಕೊರೊನಾ ಇನ್ನೇನು ಹೋಗೇಬಿಟ್ಟಿತ್ತೆಂದು ನಾವೆಲ್ಲ ನಿರಾಳವಾಗಿ ನಿಟ್ಟುಸಿರು ಬಿಡುತ್ತಾ ಕೂತಿರುವಾಗ 'ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲಿ' ಎಂದು ಅಣಕಿಸುತ್ತಿದೆ. ಮನುಷ್ಯನ ಮರೆವು ಸ್ವಾಭಾವಿಕ, ಆದರೆ ಈ ವಿಷಯದಲ್ಲಿ ನಾವು ಎಚ್ಚೆತ್ತುಕೊಳ್ಳಬೇಕು. ನಾವು ಉಂಟಾದ ಅವಘಡವನ್ನು ಮರೆತು, ಸಹಜ ಜೀವನದತ್ತ ವಾಲುತ್ತಿದ್ದೇವೆ.



ಹೀಗಿರುವಾಗ ಕೊರೊನಾದ ಎರಡನೇ ಅಲೆ ಮತ್ತೆ ಮಾನವನನ್ನು ನಿಧಾನವಾಗಿ ಮುಸುರಿಕೊಳ್ಳಲಾರಂಭಿಸಿದೆ. ಹೀಗಾಗಿ ನಮಗೆ ಕೊರೊನಾದ ಎರಡನೇ ಅಲೆ ಹೇಗಿರುತ್ತದೆಯೋ, ಏನೋ ಎಂಬ ಭಯ ಕಾಡಹತ್ತಿದೆ. ಇದು ಹಿಂದಿನ ಅಲೆಗಿಂತ ಬಹಳ ಭೀಕರವಾಗಿರಲೂಬಹುದು. ಮತ್ತೆ ಮತ್ತೆ ಮರುಕಳಿಸುತ್ತಲೂ ಸಾಗಬಹುದು. ಪುನಃ ಪುನಃ ವರ್ಷವಿಡೀ ಅವತರಿಸಲೂ ಬಹುದು, ಜನರನ್ನು ಕಾಡಲೂಬಹುದು. ಈ ರೋಗವು ಮುಂದಿನ ದಿನಗಳಲ್ಲಿ ಡೆಂಗ್ಯೂ, ಹೆಚ್1ಎನ್1 ಮತ್ತು ಫ್ಲೂ ತರಹ ಕಮ್ಯುನಿಟಿಯಲ್ಲಿ ಉಳಿಯಬಹುದು. ಹೀಗಾಗಿ ನಾವೆಲ್ಲಾ ಕೋವಿಡ್ ಜೊತೆ ಬದುಕುವ ಕಲೆಯನ್ನು ಕರಗತ ಮಾಡಿಕೊಳ್ಳುವುದು ಅನಿವಾರ್ಯವಾಗಲೂಬಹುದು. ಈ ಬಗ್ಗೆ ನಾವು ಎಷ್ಟು ಜಾಗೃತರಾಗಿದ್ದರೂ ಸಾಲದು.

ಕಾಯಿಲೆಯನ್ನು ಮಣಿಸುವ ಲಸಿಕೆಯೇನೋ ಬಂದುಬಿಟ್ಟಿದೆ. ದೇಶದಾದ್ಯಂತ ಎಲ್ಲೆಲ್ಲೂ ಜನರಿಗೆ ಲಸಿಕೆ ಕೊಡಲಾಗುತ್ತಿದೆ. ಲಸಿಕೆ ಬಗ್ಗೆ ಇದರ ಅಡ್ಡ-ಉದ್ದ ಪರಿಣಾಮಗಳ ಬಗ್ಗೆ ಕಿಂಚಿತ್ತೂ ಹೆದರಿಕೆ ಬೇಡ. ಇದು ಜೀವ ಉಳಿಸುವ, ಅಭಯ ನೀಡುವ ಸುರಕ್ಷಿತ ಲಸಿಕೆ. ಎಲ್ಲರೂ ಲಸಿಕೆ ತೆಗೆದುಕೊಳ್ಳುವುದು ಕ್ಷೇಮ. ಇದುವರೆಗೆ ಲಸಿಕೆ ತೆಗೆದುಕೊಳ್ಳದ ಎಲ್ಲರೂ ಹಿಂದುಮುಂದು ನೋಡದೆ ಇಂದೇ ಲಸಿಕೆ ತೆಗೆದುಕೊಳ್ಳುವುದು ಅತಿ ಮುಖ್ಯ. ಬಹಳ ಜನರು ಲಸಿಕೆ ಹಾಕಿಸಿಕೊಳ್ಳಿ ಎಂದು ಹೇಳಿದಾಗ, ಅದರ ಬಗ್ಗೆ ಸುಮಾರು ಮರುಪ್ರಶ್ನೆಗಳನ್ನು ಕೇಳುತ್ತಾರೆ. ಈ ಲಸಿಕೆಯಿಂದ ಯಾವ ಅಡ್ಡಪರಿಣಾಮಗಳೂ ಆಗುವುದಿಲ್ಲ. ಇದರ ಬಗ್ಗೆ ಚಿಂತೆ ಬೇಡ.

ಎರಡನೆ ಕೊರೊನಾ ಅಲೆಯಲ್ಲಿ ಆರಂಭದಲ್ಲಿ ಕೆಮ್ಮು, ಜ್ವರ, ಕೀಲು ನೋವು, ಗಂಟಲು ನೋವು, ರುಚಿ-ವಾಸನೆ ಗ್ರಹಿಸದಿರುವುದು ಇತ್ಯಾದಿ ಲಕ್ಷಣಗಳು ಕಾಣದೇ ಇರಬಹುದು. ತಕ್ಷಣ ಇದು ಶ್ವಾಸಕೋಶವನ್ನು ಹಾಳುಮಾಡಬಹುದು.

ಕೊರೊನಾ ವೈರಸ್‌ಗಳು ನೇರವಾಗಿ ನಮ್ಮ ಶ್ವಾಸಕೋಶವನ್ನೇ ಮುಸುರುತ್ತವೆ. ಉಸಿರಾಡುವ ವ್ಯವಸ್ಥೆಗೇ ಮುತ್ತಿಗೆ ಹಾಕುತ್ತವೆ. ಉಸಿರಾಟ ನಡೆಯುವ ಮೂಲ ಹಾದಿಯನ್ನೇ ಹಾಳುಗೆಡುವುತ್ತವೆ. ಪ್ರಾರಂಭದಲ್ಲಿ ವೆಂಟಿಲೇಟರ್ ಅವಲಂಬಿತವಾಗಿ ಚಿಕಿತ್ಸೆ ನೀಡಬಹುದು. ಆದರೆ ರೋಗ ಮುಂದುವರೆದರೆ ಶ್ವಾಸಕೋಶವು ಸಹ ಉಸಿರಾಡಲು ವಿಫಲವಾಗುತ್ತದೆ. ದೇಹಕ್ಕೆ ಪ್ರಾಣವಾಯು ದೊರೆಯದೆ ಅತೀವ ಸಂಕಷ್ಟ ಒದಗುತ್ತದೆ. ಹೀಗೆ ಸಾವಿನಂಚಿಗೆ ತಲುಪಿ ದವರನ್ನು ಆಸ್ಪತ್ರೆಗಳಿಂದಾಗಲೀ, ವೈದ್ಯರಿಂ ದಾಗಲೀ, ವೆಂಟಿಲೇಟರ್‌ಗಳಿಂದಾಗಲೀ ಬದುಕುಳಿಸು ವುದು ಸುಲಭ ಸಾಧ್ಯವಲ್ಲ. ಹೀಗೆ ಸಾವಿನಂಚಿಗೆ ಹೋಗಿ ಹೆಣಗಾಟ ನಡೆಸುವು ದಕ್ಕಿಂತಾ ಅತೀ ಪ್ರಾರಂಭದ ಹಂತದಲ್ಲಿಯೇ ವೈದ್ಯರ ಬಳಿ ಹೋದರೆ ತಕ್ಕ ಮದ್ದು ಸಿಕ್ಕೀತು. ಸಾಯುವವರು ಬದುಕುಳಿಯಬಹುದು.


ಕೋವಿಡ್-19 ವೈರಸ್ ಶ್ವಾಸಕೋಶವನ್ನು ಹೊಕ್ಕ ನಂತರ ಮೂರು ಹಂತಗಳಲ್ಲಿ ಸೋಂಕನ್ನು ತೀವ್ರಗೊಳಿಸುತ್ತದೆ.

**1. ಎಕ್ಸೂಡೇಟಿವ್ ಫೇಸ್** : ಅಂದರೆ ಪ್ರಾರಂಭದಲ್ಲಿ ಶ್ವಾಸಕೋಶದ ನಂಜು ಉಂಟಾದಾಗ ಶ್ವಾಸಕೋಶದಲ್ಲಿ ರಕ್ತ ಮತ್ತು ಹೊರ ಸೂಸುವ ದ್ರವ ಇರುತ್ತದೆ. ಚಿಕಿತ್ಸೆಯನ್ನು ಬೇಗ ಮುಂದುವರೆಸಿದರೆ ಈ ಹಂತದಲ್ಲಿ ಬಹುತೇಕ ಚಿಕಿತ್ಸೆ ಸಫಲವಾಗುತ್ತದೆ. ಅಲ್ವಿಯೋಲಾರ್ ಹಾನಿ ಮತ್ತು ಎಂಡೋಥಿಲಿಯಲ್ ಗಾಯವನ್ನು ಹರಡುತ್ತದೆ.

**2. ಪ್ರೊಲಿಫರೇಟಿವ್ ಫೇಸ್** : ಇದು ಎರಡನೇ ಹಂತವಾಗಿರುತ್ತದೆ. ಸೋಂಕು ಹೆಚ್ಚಾದರೆ ಮತ್ತು ಚಿಕಿತ್ಸೆ ಇಲ್ಲದಿದ್ದರೆ ಈ ಹಂತಕ್ಕೆ ಹೋಗುತ್ತದೆ. ಈ ಹಂತದಲ್ಲಿ ಜೀವಕೋಶ ನಾಶವಾಗುತ್ತದೆ. ಸೋಂಕಿನ ನಂತರ ಈ ಹಂತ 7-14 ದಿನಗಳಲ್ಲಿ ಬರುತ್ತದೆ. ಈ ಹಂತದಲ್ಲಿ ದೇಹ ಶ್ವಾಸಕೋಶಗಳನ್ನು ದುರಸ್ತಿ ಮಾಡುವಲ್ಲಿ ಪ್ರಯತ್ನ ಮಾಡುತ್ತದೆ. ಈ ಹಂತಕ್ಕೆ ಹೋದರೆ ವೆಂಟಿಲೇಟರ್ ಬೇಕಾಗುತ್ತದೆ. ರೋಗಿ ತೀವ್ರ ಉಸಿರಾಟ ತೊಂದರೆಯಲ್ಲಿರುತ್ತಾನೆ. ಈ ಹಂತದವರೆಗೆ ಕಾಯಿಲೆಯನ್ನು ವಾಸಿ ಮಾಡುವ ಬಹುತೇಕ ಪ್ರಯತ್ನಗಳನ್ನು ಮಾಡಬಹುದು.

**3. ಫೈಬ್ರೊಟಿಕ್ ಫೇಸ್** : ಈ ಹಂತದಲ್ಲಿ ಸೋಂಕು ಸುಮಾರು 3 ವಾರಗಳಾದ ಮೇಲೆ ಇದು ಉಂಟಾಗುತ್ತದೆ. ಸೋಂಕಿನ ಪ್ರಮಾಣ ತೀವ್ರತೆಯಲ್ಲಿರುತ್ತದೆ. ಪ್ರಾಣವಾಯು ರಕ್ತಕ್ಕೆ ಹೋಗುವುದು ಕಡಿಮೆಯಾಗಿರುತ್ತದೆ. ಬೇರೆ ಅಂಗಾಂಗಗಳು ವೈಫಲ್ಯವಾಗಿರುತ್ತವೆ. ಈ ಹಂತ ಆಕ್ಸಿಜನ್ ಅವಲಂಬಿತ ಹಂತವಾಗಿ ರುತ್ತದೆ ಹಾಗೂ ವೆಂಟಿಲೇಟರ್ ಇಲ್ಲದೆ ರೋಗಿ ಬದುಕುಳಿಯುವುದು ಅಸಾಧ್ಯ.


ಮಾಸ್ಕ್, ಅಂತರ, ಸ್ಯಾನಿಟೈಜರ್, ಕೈ ತೊಳೆದುಕೊಳ್ಳುವುದು ಜೀವನದ ಅವಿಭಾಜ್ಯ ಅಂಗವೆಂದೇ ತಿಳಿಯಬೇಕು, ತಿಳಿದು ಪಾಲಿಸಬೇಕು. ಲಸಿಕೆ ಪಡೆದವರಿಗೂ ಸಹಾ ಈ ಮಂತ್ರ ಅತ್ಯಗತ್ಯ ಮತ್ತು ಅನಿವಾರ್ಯ. ಕೋವಿಡ್ ಎಂಬ ಯಮಧೂತನೊಂದಿಗೆ ಹುಡುಗಾಟ ಬೇಡ. ಜಾಗೃತಿಯೊಂದೇ ಕೋವಿಡ್‌ನಿಂದ ರಕ್ಷಣೆ ಪಡೆವ ಏಕೈಕ ಮಾರ್ಗ.



**- ಡಾ|| ರವಿ ಆರ್.**
ಕಾರ್ಡಿಯಾಕ್ ಅನಸ್ತೇಸಿಯಾ ಕ್ರಿಟಿಕಲ್ ಕೇರ್ ಮೆಡಿಸಿನ್ ಪ್ರೊಫೆಸರ್ ಮತ್ತು ಹೆಡ್ ಅನಸ್ತೇಸಿಯಾ ಮತ್ತು ತುರ್ತು ಚಿಕಿತ್ಸಾ ವಿಭಾಗ, ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ.

# ಸಂಘರ್ಷದ ಪರಿಹಾರಕ್ಕೆ ಸಾಮರಸ್ಯವೇ ಮದ್ದು

## ಶರಣ ಸಂಗಮದಲ್ಲಿ ಬಸವ ಪ್ರಭು ಶ್ರೀ ವಿಶ್ಲೇಷಣೆ



ದಾವಣಗೆರೆ, ಮಾ.4- ಇಂದು ಸಮಾಜದಲ್ಲಿ ನಡೆಯುತ್ತಿರುವ ಸಂಘರ್ಷದ ಪರಿಹಾರಕ್ಕೆ ಸಾಮರಸ್ಯವೇ ಮದ್ದು ಎಂದು ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ವಿಶ್ಲೇಷಿಸಿದರು.

ಶ್ರೀಗಳು ನಿನ್ನೆ ನಗರದ ಶ್ರೀ ಶಿವಯೋಗ ಮಂದಿರದಲ್ಲಿ ಏರ್ಪಡಿಸಿದ್ದ ಶರಣ ಸಂಗಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡುತ್ತಿದ್ದರು.

ಸಂಘರ್ಷವು ವ್ಯಕ್ತಿ-ವ್ಯಕ್ತಿಗಳ ನಡುವೆ ಉದ್ಭವಿಸಿ, ಮುಂದೆ ಧರ್ಮ-ಧರ್ಮಗಳ ನಡುವೆ, ದೇಶ-ದೇಶಗಳ ನಡುವೆ ಬೆಳೆಯುತ್ತಾ ಹೋಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಇಂದು ಜಾತಿ ಮಾನವ, ಭೀತಿ ಮಾನವ ವಿಜೃಂಭಿಸುತ್ತಿದ್ದು, ಮನುಷ್ಯ ಅಧಿಕಾರ, ಅಂತಸ್ತು ಗಳಿಸಲು ಹೋರಾಡುತ್ತಿದ್ದಾನೆ. ಇಂತಹ ಬೆಳವಣಿಗೆಯಿಂದಾಗಿ ಇಂದು ಎಲ್ಲೆಡೆ ಜಾತಿ ಮಾನವ ಕಾಣಿಸಿಕೊಳ್ಳುತ್ತಿದ್ದಾನೆ ಎಂದು ತಿಳಿಸಿದರು.

ಮನುಷ್ಯ ಅಣು-ಪರಮಾಣು ಬಾಂಬುಗಳಿಂದ ಭಯೋತ್ಪಾದನೆಯ ಹಾದಿಯತ್ತ ಸಾಗುತ್ತಾ ಭೀತಿ ಮಾನವನಾಗುತ್ತಿದ್ದಾನೆ ಎಂದರು.

ಮಾನವ ಕುಲ ಒಂದೇ ಎಂಬ ಭಾವನೆ ಎಲ್ಲರಲ್ಲೂ ಮೂಡಿದಾಗ ಪ್ರೀತಿ ಮಾನವನಾಗುತ್ತಾನೆ. ಮುಂದೆ ಅವನೇ ವಿಶ್ವಮಾನವನಾಗುತ್ತಾನೆ ಎಂದು ಹೇಳಿದರು.

ಅತಿಥಿಗಳಾಗಿ ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಕೆ.ಎಂ.ಮಂಜುನಾಥ್ ಮತ್ತು ಕ್ಷತ್ರಿಯ ಮರಾಠ ಸಮಾಜದ ಅಧ್ಯಕ್ಷ ಮಾಲತೇಶರಾವ್ ಜಾಧವ್ ಇವರುಗಳು ಆಗಮಿಸಿದ್ದರು.

ಬಸವಕಲಾ ಲೋಕದವರಿಂದ ವಚನ ಸಂಗೀತ ನಡೆಯಿತು. ಎನ್.ಜೆ.ಶಿವಕುಮಾರ್ ಸ್ವಾಗತಿಸಿ, ನಿರೂಪಿಸಿದರು. ಕಣಕುಪ್ಪಿ ಮುರುಗೇಶ್ ವಂದಿಸಿದರು. ಕಾರ್ಯಕ್ರಮದ ನಂತರ ಭೂಮಿಕ ವನಿತಾ ರಂಗ ವೇದಿಕೆಯ ಸದಸ್ಯರು ಭಾರತಾಂಭೆ ಎಂಬ ನಾಟಕವನ್ನು ಅಭಿನಯಿಸಿದರು.

## ಪ್ರವಾಸಿ ತಾಣದಂತಿರುವ ರೈಲ್ವೆ ನಿಲ್ದಾಣ




ದಾವಣಗೆರೆ, ಏ. 4 - ಅತ್ಯಾಧುನಿಕ ನವೀಕೃತ ರೈಲ್ವೆ ನಿಲ್ದಾಣ ದಾವಣಗೆರೆ ಜಿಲ್ಲೆಗೊಂದು ಪ್ರವಾಸಿ ತಾಣದಂತಾಗಿದೆ ಎಂದು ದಾವಣಗೆರೆ ಶೋಷಿತ ವರ್ಗಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಬಾಡದ ಆನಂದರಾಜ್ ಹರ್ಷ ವ್ಯಕ್ತಪಡಿಸಿದರು. ನವೀಕೃತ ರೈಲ್ವೆ ನಿಲ್ದಾಣ ದ ಉದ್ಘಾಟನೆ ಸಂದರ್ಭದಲ್ಲಿ ನಡೆದ ಸೌಹಾರ್ದ ಕೂಟ ಸಮಾರಂಭದಲ್ಲಿ ಸಂಸದ ಜಿಎಂ.ಸಿದ್ದೇಶ್ವರ ಅವರಿಗೆ ಗೌರವಾರ್ಪಣೆ ಅರ್ಪಿಸಿದ ದಾವಣಗೆರೆ ಶೋಷಿತ ವರ್ಗಗಳ ಒಕ್ಕೂಟದ ಬಾಡದ ಆನಂದರಾಜ್ ನೇತೃತ್ವದಲ್ಲಿ ಸಂಸದರನ್ನು ಅಭಿನಂದಿಸಿದರು. ಸಿ.ವಿ. ನರೇಂದ್ರಕುಮಾರ್, ಬಾಬು, ಮುರುಳಿ ಯಾದವ್, ಮಂಜುನಾಯ್ಕ್, ಸಂತೋಷಕುಮಾರ್ ಮತ್ತಿತರರು ಇದ್ದರು.

# ಕೋರ್ಟ್ ವಾದ-ವಿವಾದಗಳ ಅರಿವಿಗೆ ಅಣಕು ನ್ಯಾಯಾಲಯ ಅಡಿಪಾಯ

ದಾವಣಗೆರೆ, ಏ.4- ಕೋರ್ಟ್ ವಾದ-ವಿವಾದಗಳಲ್ಲಿ ಪಾಲ್ಗೊಳ್ಳಲು ಮತ್ತು ಕೋರ್ಟ್‌ಗಳಲ್ಲಿ ನಡೆಯುವ ವಿಚಾರಣೆಗಳ ನೀತಿ ನಿಯಮಗಳ ಅರಿವು ಮೂಡಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಅಣಕು ನ್ಯಾಯಾಲಯ ಅಡಿಪಾಯವಿದ್ದಂತೆ ಎಂದು ಹಿರಿಯ ವಕೀಲ ಎಲ್.ಎಚ್. ಅರುಣ್ ಕುಮಾರ್ ತಿಳಿಸಿದರು.




**ಅಣಕು ನ್ಯಾಯಾಲಯ ಕಾರ್ಯಕ್ರಮದಲ್ಲಿ ವಕೀಲ ಎಲ್.ಹೆಚ್. ಅರುಣ್‌ಕುಮಾರ್**

ದಾವಣಗೆರೆ ವಿಶ್ವವಿದ್ಯಾನಿಲಯ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಿಂದ ಏರ್ಪಡಿಸಿದ್ದ ಅಣಕು-ನ್ಯಾಯಾಲಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಕರಣ ನಿರೂಪಿಸುವ ರೀತಿ ಭಾಷೆ, ಎಲ್ಲವು ವಾದ ಮಂಡಿಸುವಾಗ ಪ್ರಮುಖವಾಗಿರುತ್ತವೆ. ಅಣಕು ನ್ಯಾಯಾಲಯಗಳಿಂದ ವಿದ್ಯಾರ್ಥಿಗಳು ಕಾನೂನು ಅರ್ಥೈಸಿಕೊಂಡು ಉತ್ತಮ ಸಂವಹನ ಕಲೆ ಬೆಳೆಸಿಕೊಳ್ಳುತ್ತಾರೆ. ಭಾರತದ ಸಂವಿಧಾನದಡಿಯಲ್ಲಿ ಕಾರ್ಯಾಂಗ , ನ್ಯಾಯಾಂಗ, ಶಾಸಕಾಂಗ ಪ್ರಮುಖ ಅಂಗಗಳಾಗಿದ್ದು ವರ್ತಮಾನದ ಪರಿಸ್ಥಿತಿಯಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳ ಜನರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ವಿಫಲವಾಗುತ್ತಿರುವುದು ವಿಷಾದನೀಯ ಎಂದರು.

ನ್ಯಾಯಾಂಗದ ಮೇಲೆ ಜನರು ನಂಬಿಕೆ ಇಟ್ಟುಕೊಂಡಿದ್ದು ಅದನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಹೊಣೆಯಾಗಿದೆ. ನ್ಯಾಯಾಂಗ ವಿಫಲವಾದರೆ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕಲಿದೆ. ವಿದ್ಯಾರ್ಥಿಗಳು ಕಾನೂನು ಅರಿಯುವ ಮೂಲಕ ಪ್ರಜಾಪ್ರಭುತ್ವ ಉಳಿಸುವ, ದೇಶಕಟ್ಟುವ ಕೆಲಸದಲ್ಲಿ ಪಾಲ್ಗೊಳ್ಳಬೇಕು ಎಂದು ತಿಳಿಸಿದರು.

ಕುಲಸಚಿವೆ ಗಾಯತ್ರಿ ದೇವರಾಜ್ ಮಾತನಾಡಿ, ರಾಜ್ಯ ಶಾಸ್ತ್ರ ಅಧ್ಯಯನ ವಿಭಾಗ ಅತಿ ಹೆಚ್ಚಿನ ಮಾನವ ಸಂಪನ್ಮೂಲ ಹೊಂದಿದ್ದು, ಇಂತಹ ಕಾರ್ಯಕ್ರಮ ರೂಪಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು ಬೆಳೆಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದಲ್ಲಿ ಡಾ. ನಾಗರಾಜ್ ಎನ್. ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಪ್ರವೀಣ್ ಟಿ. ಎಲ್ . ನಿರೂಪಿಸಿದರು. ಡಾ. ಬಸವರಾಜ್ ಬೆನಕನಹಳ್ಳಿ ವಂದಿಸಿದರು. ಡಾ. ಅಶೋಕ ಪಲ್ಲೇದ್, ಡಾ. ಜಾಜೂರು, ಡಾ. ಸ್ವಾಮಿ ಇನ್ನಿತರರಿದ್ದರು. ವಿದ್ಯಾರ್ಥಿಗಳು ಯಶಸ್ವಿಯಾಗಿ ಅಣಕು ನ್ಯಾಯಾಲಯದಲ್ಲಿ ಪ್ರಕರಣ ನಡೆಸಿ ಪ್ರಶಂಸೆಗೆ ಪಾತ್ರರಾದರು.

# ಹಿಂದೂ ಧಾರ್ಮಿಕ ದತ್ತಿ ಇಲಾಖೆ ಸಹಾಯಕ ಆಯುಕ್ತರಿಗೆ ಸನ್ಮಾನ




ಹಡಗಲಿ

ಹೂವಿನಹಡಗಲಿ, ಏ. 4 - ಶ್ರೀ ಕ್ಷೇತ್ರ ಮೈಲಾರ, ಕೊಟ್ಟೂರು, ಕುರುಗೋಡು, ಹಂಪಿ, ಬಳ್ಳಾರಿ, ಮದಲಗಟ್ಟೆ, ಉಚ್ಚಂಗಿದುರ್ಗ ಮೊದಲಾದ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಣಾಧಿಕಾರಿಯಾಗಿ ಕೆಲಸ ಮಾಡಿದ ಎಂ.ಹೆಚ್.ಪ್ರಕಾಶರಾವ್ ಅವರು ಸಹಾಯಕ ಆಯುಕ್ತರಾಗಿ ಪದೋನ್ನತಿ ಹೊಂದಿ ಬಳ್ಳಾರಿಗೆ ಈಗಾಗಲೇ ವರ್ಗವಾಗಿರುವ ಹಿನ್ನೆಲೆಯಲ್ಲಿ ಅವರಿಗೆ ತಾಲ್ಲೂಕಿನ ಶ್ರೀ ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಶನಿವಾರ ಗೌರವ ಸನ್ಮಾನ ಮಾಡಲಾಯಿತು.

ಇದುವರೆಗೂ ಎಲ್ಲಾ ಸಿಬ್ಬಂದಿ ಕೊಟ್ಟ ಸಹಕಾರ ಮತ್ತು ಸೇವೆಯನ್ನು ಪ್ರಕಾಶರಾವ್ ನೆನಪಿಸಿಕೊಳ್ಳುತ್ತಾ, ಧನ್ಯತಾಭಾವದ ನುಡಿಗಳನ್ನಾಡಿದರು.

ಈ ಸಂದರ್ಭದಲ್ಲಿ ಮೈಲಾರ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿಯಾದ ಹೆಚ್. ಗಂಗಾಧರಪ್ಪ ಸೇರಿದಂತೆ ವಿವಿಧ ದೇವಸ್ಥಾನಗಳ ಸಿಬ್ಬಂದಿಗಳು ಹಾಜರಿದ್ದರು.

# ಹರಿಹರದ ಸಂತ ಅಲೋಶಿಯಸ್ ಕಾಲೇಜಿಲ್ಲಿ ವಸ್ತು ಪ್ರದರ್ಶನ



ಹರಿಹರ, ಏ.4- ವಿದ್ಯಾರ್ಥಿಗಳಲ್ಲಿ ಕುತೂಹಲ, ಸೃಜನಶೀಲತೆ, ವೈಜ್ಞಾನಿಕ ಮನೋಪ್ರವೃತ್ತಿ, ಹೊಸ ಹೊಸ ಆವಿಷ್ಕಾರ ಇತ್ಯಾದಿ ಗುಣಗಳನ್ನು ಮೈಗೂಡಿಸಿಕೊಳ್ಳುವ ನಿಟ್ಟಿನಲ್ಲಿ ನಗರದ ಸಂತ ಅಲೋಶಿಯಸ್ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಸ್ತು ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ವಸ್ತು ಪ್ರದರ್ಶನದಲ್ಲಿ ಮುಖ್ಯವಾಗಿ ತುಂತುರು ನೀರಾವರಿ ಪದ್ಧತಿ, ಉಸಿರಾಟ ಕ್ರಿಯೆ, ಬಿರ್ಲಾ ಶೈಲಿಯ ಉತ್ಪಾದನಾ ಯಂತ್ರ, ಸಿಮೆಂಟ್ ತಯಾರಿಕಾ ಘಟಕ, ನೀರಿನ ಶುದ್ಧೀಕರಣ ಘಟಕ, ಡಾರ್ವಿನ್‌ನ ವಿಕಾಸವಾದ, ಹೊಗೆ ರಹಿತ ಇಂಧನ, ಬಾಹ್ಯಾಕಾಶ ವ್ಯವಸ್ಥೆ, ಪುರಾತನ ನಾಣ್ಯಗಳು ಹಾಗೂ ನೋಟುಗಳ ಸಂಗ್ರಹ, ಹಳ್ಳಿಗಳಿಂದ ಪಟ್ಟಣದ ಕಡೆಗೆ ಜೀವನ ಶೈಲಿಯ ಚಿತ್ರಣ, ಭಾರತದ ನದಿ ವ್ಯವಸ್ಥೆ ಹೀಗೆ ಹಲವಾರು ಮಾದರಿಗಳು ವಸ್ತು ಪ್ರದರ್ಶನದ ಭಾಗವಾಗಿದ್ದವು.

ಈ ವಸ್ತು ಪ್ರದರ್ಶನ ಸ್ಪರ್ಧೆಯ ತೀರ್ಪುಗಾರಿಕೆಯನ್ನು ನೆರವೇರಿಸಿ ಕೊಟ್ಟವರು ಆದಿತ್ಯ ಬಿರ್ಲಾ ಪ್ರೌಢಶಾಲೆಯ ವಿಜ್ಞಾನ ಶಿಕ್ಷಕ ಸಂತೋಷ್, ಸೈಂಟ್ ಮೇರಿಸ್ ಪ್ರೌಢಶಾಲೆ ಶಿಕ್ಷಕ ಸ್ಟೀವನ್ ತೀರ್ಪುಗಾರರಾಗಿ ಆಗಮಿಸಿದ್ದರು. ಕಾಲೇಜು ಪ್ರಾಂಶುಪಾಲ ಬ್ಯಾಪ್ಟಿಸ್ಟ್ ಸನ್ನಿ ಗುಡಿನೋ, ಕುಮಾರಿ ಪ್ರಿನ್ಸಿ ಫ್ಲಾವಿಯಾ, ವಸ್ತುಪ್ರದರ್ಶನ ಸಂಯೋಜಕರಾದ ಬಿ. ಕವಿತಾ, ಬೋಧಕ - ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.


|| ಜೈ ಶ್ರೀಮನ್ನಾರಾಯಣ ||
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ತಂದೆ ದಿ. ಶ್ರೀ ರಾಮರಾವ್ ಹೊನ್ನತ್ತಿಯವರ ಸ್ಮರಣಾರ್ಥ ಡಾ|| ಮಾಧವ ಹೊನ್ನತ್ತಿ, ನೇತ್ರ ತಜ್ಞರು, ಇವರ ಕೊಡುಗೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಶಾಮನೂರು ಹತ್ತಿರ ಡಾಲರ್ಸ್ ಕಾಲೋನಿಯಲ್ಲಿ**
ಸೈಟ್‌ಗಳು ಮಾರಾಟಕ್ಕಿವೆ
30x50 West, 30x45 East, 50x80 North, 40 ಅಡಿ ರೋಡಿಗಿದೆ. 60x45 North East corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
50x80 South, 40x60 South, 40x60 East, 40x60 North, 30x50 West, 30x50 North, East Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410-14130

**ಸೈಟ್‌ಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x40, 40x60, ಪಶ್ಚಿಮ 30x40, 38x40, ದಕ್ಷಿಣ 50x80, 50x120. ವಿನಾಯಕ ಬಡಾವಣೆ (ವಿದ್ಯಾನಗರ) ಉತ್ತರ 40x86 ಅಕ್ಕಪಕ್ಕ, ದಕ್ಷಿಣ 40x90, 40x50.
ಸೈಟ್ ಕೊಡುವುದಕ್ಕೆ ಹಾಗೂ ತೆಗೆದುಕೊಳ್ಳುವುದಕ್ಕೆ ವಿಚಾರಿಸಿ
ಐಗೂರು ವಿಜಯ್‌ಕುಮಾರ್
99457 02495
ಸುರೇಶ್ 95911 60520

**ಕಾರು ಮಾರಾಟಕ್ಕೆ ಬೇಕಿದೆ**
Volkswagen Vento ಅಥವಾ Skoda Rapid.
8 ವರ್ಷದೊಳಗಿನ ಯಾವುದೇ ಕಂಪನಿಯ ಕಾರುಗಳು
ಕಿರಣ್ ಬೂಸ್ನೂರ್ : 97315-63409
Contact for Used Cars Buying & Selling

**ಬೇಕಾಗಿದೆ**
ಚಿಕ್ಕದಾದ ರೆಡಿ ಹೋಟೆಲ್ ಅಥವಾ ಮಳಿಗೆ ಹೋಟೆಲ್ ನಡೆಸುವುದಕ್ಕೆ ಬೇಕಾಗಿದೆ.
99453 21532

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98440-63507

**ಹೊಲ ಮಾರಾಟಕ್ಕಿದೆ**
ಬೆಂಡಿಗೇರಿ ಹತ್ತಿರ ಅಳಿಗಂಜಿಕೇರಿಯಲ್ಲಿ 4 ಎಕರೆ 6 ಸೆಂಟ್ಸ್ (ಕೆಂಪು ಭೂಮಿ) ಮಾರಾಟಕ್ಕಿದೆ. ಸಂಪರ್ಕಿಸಿರಿ
99007 16026

**ಸಂಗೀತ ಆಸಕ್ತರಿಗಾಗಿ**
ಕೀ ಬೋರ್ಡ್ & ಹಾರ್ಮೋನಿಯಂ ಕ್ಲಾಸಸ್, ಸಿಂಗಿಂಗ್ ಕ್ಲಾಸಸ್ ತಮ್ಮ ಮನೆಗಳಿಗೇ ಬಂದು ತರಬೇತಿ ನೀಡಲಾಗುವುದು. ಸಂಪರ್ಕಿಸಿ :
ರವಿಕುಮಾರ್ ಆರ್.
ವಾದ್ಯಗೋಷ್ಠಿ ಸಂಗೀತ ನಿರ್ದೇಶಕರು
Mob. : 99646 92457

**ಬೇಕಾಗಿದ್ದಾರೆ**
ಸುಪ್ರಸಿದ್ಧ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್ ಹಾಗೂ ಕ್ಯಾಷಿಯರ್ ಬೇಕಾಗಿದ್ದಾರೆ. ಸಂಪರ್ಕಿಸಿ.
ಗಂಗಾವತಿ ಸ್ಕಿಲ್ ಸ್ಯಾರಿ ಸೆಂಟರ್
ಬಿನ್ನಿಕಂಪನಿ ರಸ್ತೆ, ದಾವಣಗೆರೆ-01.

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 8.30ರಿಂದ ಸಂಜೆ 5.30ರವರೆಗೆ ಮನೆ ಕೆಲಸದೊಂದಿಗೆ ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
63639 54459

**ತಕ್ಷಣ ಬೇಕಾಗಿದ್ದಾರೆ**
ಮಹಿಳೆ-ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್ಸ್ ಹೌಸ್ ಕೀಪಿಂಗ್ , ರೂಂ ಬಾಯ್ಸ್ ಬೇಕಾಗಿದ್ದಾರೆ. ESI & PF ಸೌಲಭ್ಯವಿರುತ್ತದೆ. ಹೊಲಗದ್ದೆ, ತೋಟ, ಫಾರಂಗಳಲ್ಲಿ, ಹೋಟೆಲ್ ಕಂಪನಿ, ಗಾರ್ಮೆಂಟ್‌ಗಳಿಗೆ ಕಾರ್ಮಿಕರು ಬೇಕಾಗಿದ್ದಾರೆ.
88616 05406
80736 61259

**15 ದಿನಗಳಲ್ಲಿ ಪರಿಹಾರ**
BP, sugar, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ಸ್ಟ್ರೋಕ್, ಮಂಡಿ/ಬೆನ್ನು/ ಸೊಂಟ ನೋವುಗಳು ಪಾದದಲ್ಲಿ ಉರಿ/ ನೋವು, ಮೈಗ್ರೇನ್, ಮಸಲ್ ಕ್ಯಾಂಪ್
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಹರ್ಷ ಹಾರ್ಡ್ ವೇರ್ ಅಂಡ್ ಪೇಂಟ್ಸ್
ಸುಭಾಷ್ ರೋಡ್, ಅಶೋಕ ಚಿತ್ರಮಂದಿರದ ಎದುರು, ರೈಲ್ವೆ ಗೇಟ್ ಹತ್ತಿರ, ದಾವಣಗೆರೆ - 577 001
ದೂರವಾಣಿ ಸಂಖ್ಯೆ
08192 254787

**JOBS**
MCS ACADEMY
Training & Placement Cell
98444 92888

**ಗೋಡೌನ್ ಬಾಡಿಗೆಗಿದೆ**
ದಾವಣಗೆರೆ ನಗರದ ಎಪಿಎಂಸಿ ಆವರಣದಲ್ಲಿ 45x120 (5,400 ಚ. ಅಡಿ) ಅಳತೆಯ ಗೋಡೌನ್ ಬಾಡಿಗೆಗಿದೆ. ಜೊತೆಗೆ ಅಟ್ಯಾಚ್ ಬಾತ್ ರೂಂ ಸೌಲಭ್ಯ ಇರುವ 2 ಆಫೀಸ್ ರೂಮುಗಳು ಬಾಡಿಗೆಗಿವೆ. ಸಂಪರ್ಕಿಸಿ.
76767 85353

**State Bank of India 'ಜನ್‌ಧನ್ ಖಾತೆ'**
ಮಾಡಲಾಗುತ್ತದೆ
('0' Account open) with ATM
(10 ವರ್ಷ ಮೇಲಿನವರಿಗೆ)
Old B.S. ಚನ್ನಬಸಪ್ಪ & ಸನ್ಸ್ ಹಿಂಭಾಗ, # 264/1, ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
ಸಂಪರ್ಕಿಸಿ : 99806 10005

**ಹೋಟೆಲ್ ಮಾರಾಟಕ್ಕೆ ಇದೆ**
ಉತ್ತಮವಾಗಿ ನಡೆಯುತ್ತಿದ್ದ ತಿಂಡಿ ಹೋಟೆಲ್ ಮಾರಾಟಕ್ಕೆ ಇದೆ (ಬೆಣ್ಣೆ ದೋಸೆ ಹೋಟೆಲ್). ಮಲೇಬೆನ್ನೂರು-ಕೊಮಾರನಹಳ್ಳಿ ಮಂಡಕ್ಕಿ ಹೋಟೆಲ್ ಎದುರು.
82777 22469, 81057 40741

**ಮಹಿಳೆ ಬೇಕಾಗಿದ್ದಾರೆ**
ಬೆಳಿಗ್ಗೆ 8.30 ರಿಂದ ಬೆಳಿಗ್ಗೆ 10.30ರವರೆಗೆ ಅಡುಗೆ ಮಾಡಲು ಹೆಣ್ಣು ಮಕ್ಕಳು ಬೇಕಾಗಿದ್ದಾರೆ. ಸಂಪರ್ಕಿಸಿ :
63639 54459

**VACANCY**
A post for Accountancy is vacant, if you are eligible please mail your resume to the below mentiond mail id. Experince Required : Minimum 2 Years Software Required : Tally & Excel, Mail id: acfdvg@gmail.com
Ph No. 08192-231168
Address: Aradhya Industries, Beside Nandi Petrol Bunk, P.B. Road, Davanagere.

**Smart city Cabs Davanagere**
Etios 4+1 A/c, Minimum 4 Km Rs 100/-, above per kms. Rs 10/- Waiting Charages - 1 Hour Rs. 100/-, 4,8,12 Hour Packages
Call 08192 255555, 99868 18205

**ನೇರ ಪರೀಕ್ಷೆಗಳು**
ಎನ್.ಟಿ.ಸಿ.-ನರ್ಸರಿ, ಟೀಚರ್ಸ್ ಟ್ರೈನಿಂಗ್, SSLC, PUC, ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ., ಬಿ.ಎಡ್., ಸರ್ಕಾರಿ ಕೆಲಸಕ್ಕೆ/ಪ್ರೈವೇಟ್ ಕೆಲಸಕ್ಕೂ ಸಹಕಾರಿ. ಸಂಪರ್ಕಿಸಿ :
ಗಂಗೋತ್ರಿ ವಿದ್ಯಾಸಂಸ್ಥೆ
ಜಯದೇವ ಸರ್ಕಲ್ ಹತ್ತಿರ, ನಿಟುವಳ್ಳಿ ರಸ್ತೆ, ದಾವಣಗೆರೆ.
ಮೊ. : 86602 35013

**ಪ್ರೊಫೆಷನಲ್ ಮೇಕಪ್ ಆರ್ಟಿಸ್ಟ್ ಕೋರ್ಸ್-2021**
20 ದಿನದ ಬ್ರೈಡಲ್ ಮೇಕಪ್, ಸ್ಯಾರಿ ಡ್ರಾಪಿಂಗ್, ಹೇರ್‌ಸ್ಟೈಲ್ ಕೋರ್ಸ್, Only for ಲೇಡೀಸ್ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
70190 73324

**ಸೈಟುಗಳು ಮಾರಾಟಕ್ಕಿವೆ**
ಫೈನಲ್ ಅಪ್ರೂವಲ್ ಆದ ಸೈಟುಗಳು ಯರಗುಂಟೆಯ ಶಿವಪುರದಲ್ಲಿ ಅತೀ ಕಡಿಮೆ ಬೆಲೆಗೆ ಮಾರಾಟಕ್ಕಿವೆ.
ಮೊ : 94838 62779

**ಸೈಟ್ ಮಾರಾಟಕ್ಕಿದೆ**
ಶಿವಗಂಗಾ ಚೌಲ್ರಿ ಪಕ್ಕ, ಮಹಾಲಕ್ಷ್ಮಿ ಲೇ ಔಟ್‌ನಲ್ಲಿ 30×40 ದಕ್ಷಿಣ ದಿಕ್ಕಿನ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
86181 82332

**ತಕ್ಷಣ ಬೇಕಾಗಿದ್ದಾರೆ**
D. Pharmacy ಮತ್ತು B.Pharmacy ಆದವರು QP ಮತ್ತು ಕೆಲಸ ಮಾಡಲು ಬೇಕಾಗಿದ್ದಾರೆ. ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡಲು ಅನುಭವ ಇರುವ ಹುಡುಗರು/ಹುಡುಗಿಯರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
89714 03988
88806 67051

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಸ್ಟಾಫ್‌ಗಳು ಬೇಕಾಗಿದ್ದಾರೆ. ವಯಸ್ಸು : 18 ರಿಂದ 25 ಹುಡುಗಿಯರು ಬೇಕಾಗಿದ್ದಾರೆ. ಸಪ್ಲೈಯರ್, ಕ್ಲೀನರ್ ಕೆಲಸಕ್ಕೆ ಬೇಕಾಗಿದ್ದಾರೆ. Cake ಮಾಡಲು Helpers ಬೇಕಾಗಿದ್ದಾರೆ. (ಹುಡುಗಿಯರು) ವಯಸ್ಸು : 18 ರಿಂದ 25 ಹುಡುಗಿಯರು. ಸ್ಥಳ : ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರೋಡ್,
Ph. : 93804 69079

**Room For Rent**
Single Attached Room with all facilities available with wardrobe and cots system. At MCC "A" block, Near Ram Krishna Ashrama, Beside Ganesha Temple
97405 69252

**ಫ್ಯಾನ್ಸಿ ಸ್ಟೋರ್ ಮಾರಾಟಕ್ಕಿದೆ**
ಶಿವಾಲಿ ಟಾಕೀಸ್ ಹತ್ತಿರ, ಜಾಲಿನಗರ ಮುಖ್ಯರಸ್ತೆ, ಸಂಪರ್ಕಿಸಿ
82177 43419

**REQUIRED**
PUC, BA, B.Com, B.Sc Candidates
Mangalam Hallmark Centre
Vinayaka Tower, 3rd Floor Near clock Tower, Davangere
Ph. 99809 60614

**ಬೇಕಾಗಿದ್ದಾರೆ**
ಉಡುಪಿ ಮತ್ತು ಮಂಗಳೂರಿನಲ್ಲಿ ವಾಟರ್ ಪ್ಯೂರಿಫಯರ್ ಮತ್ತು ಕೂಲರ್ ಅಳವಡಿಲು ಹಾಗೂ ರೀಪೇರಿ ಮಾಡಲು ITI/Diploma ಆದ ಯುವಕರು ಬೇಕಾಗಿದ್ದಾರೆ. ಸಂಬಳ : 12000/- ಊಟ, ವಸತಿ ಸೌಲಭ್ಯವಿರುತ್ತದೆ.
ಫೋ. : 93427 48775

**AM BUILDERS AND DEVELOPERS**
S.S. LAYOUT 'A' BLOCK AND VIDHANAGAR-DAVANGERE
3 BHK & 2 BHK FLATS FOR SALE
CONTACT :
95916 08453, 91486 79995

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**Excellent Coaching Center for**
IX & X 2021-22 CBSE & State Syllabus
LONG TERM BATCHES
Mathematics, Science, Social Science & English Grammar.
Admission Started
STUDY IQ ACADEMY
Davangere.
89517 17444, 97402 15992

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789, 87620 58369
94837 64859, 82173 02649

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ,
H.O : Near coffee day, Nutana collage road, Vidyanagara 2nd main, Davangere
77603 16576
90080 55813

**WANTED DELIVERY BOYS**
ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ.
Age limit: 21 to 25 years
Qualification : SSLC
Preferably Davangere city candidates
Contact:
Jain Enterprises
Chowkipet Chigateri Galli, Near Karnataka Bank ATM, Davangere.
98445 55551
98445 09222

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯ ಇರುತ್ತದೆ. ಸಂಪರ್ಕಿಸಿ
ಮಹೇಂದ್ರಕರ್ ಟೆಕ್ಸ್‌ಟೈಲ್ಸ್
ನರಸರಾಜ ರಸ್ತೆ, (ಮಂಡಿಪೇಟೆ) ದಾವಣಗೆರೆ.
90367 34919

# ಭಿತ್ತಿ ಪತ್ರ ಹಂಚಿ ಸಾರಿಗೆ ನೌಕರರ ಪ್ರತಿಭಟನೆ



ದಾವಣಗೆರೆ, ಏ.4- ಇದೇ 7ರಂದು ರಾಜ್ಯಾದ್ಯಂತ ಸಾರಿಗೆ ನೌಕರರು ಅನಿರ್ದಿಷ್ಟ ಮುಷ್ಕರ ಹಮ್ಮಿಕೊಂಡಿದ್ದು, ಇದರ ಭಾಗವಾಗಿ ನಗರದ ಗಾಂಧಿ ವೃತ್ತದಲ್ಲಿಂದು ಸಾರಿಗೆ ನೌಕರರ ಕೂಟದ ನೇತೃತ್ವದಲ್ಲಿ ಬೇಡಿಕೆಗಳ ಕುರಿತಾದ ಭಿತ್ತಿ ಪತ್ರಗಳನ್ನು ಸಾರ್ವಜನಿಕವಾಗಿ ಹಂಚುವ ಮುಖೇನ ಪ್ರತಿಭಟಿಸಲಾಯಿತು.

ಪ್ರಮುಖ ಬೇಡಿಕೆಯಾದ 6ನೇ ವೇತನ ಯಥಾವತ್ ಸೇರಿದಂತೆ 8 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸರ್ಕಾರದ ಗಮನ ಸೆಳೆಯಲಾಯಿತು.

ಈ ಸಂದರ್ಭದಲ್ಲಿ ಮುಖಂಡರಾದ ಎಸ್. ಓಂಕಾರಪ್ಪ, ಹೆಚ್. ಅಂಜನಪ್ಪ, ಹೆಚ್. ಏಳುಕೋಟಿ, ಪುಷ್ಪಾ ಭಜಂತ್ರಿ, ಮಹೇಂದ್ರ, ಸುರೇಶ, ಶೇಖರಪ್ಪ ಮತ್ತು ಸದಸ್ಯರು ಇದ್ದರು. ಶನಿವಾರವೂ ಸಹ 6ನೇ ವೇತನ ಜಾರಿಯ ಘೋಷಣೆಗಳುಳ್ಳ ಭಿತ್ತಿ ಪತ್ರವನ್ನು ನಗರದ ಕೆಎಸ್ ಆರ್ ಟಿಸಿ ಬಸ್ ನಿಲ್ದಾಣದ ಆವರಣದಲ್ಲಿನ ಡಿಪೋ ಬಳಿ ಪ್ರದರ್ಶಿಸಲಾಗಿದೆ.

# ನೂಕಾಪುರದಲ್ಲಿ ಶಾಸಕರ ಗ್ರಾಮ ವಾಸ್ತವ್ಯ

ರಾಣೇಬೆನ್ನೂರು, ಏ. 4 - ನೂಕಾಪುರದ ಮಾದರಿ ಸರ್ಕಾರಿ ಶಾಲೆಯಲ್ಲಿ ಗ್ರಾಮ ವಾಸ್ತವ್ಯ ಮಾಡಿದ ಶಾಸಕ ಅರುಣಕುಮಾರ ಪೂಜಾರ್ ಅವರು, ನೂಕಾಪುರ, ಮಾದಾಪುರ ಹಾಗೂ ರಾಮಾಪುರ ಗ್ರಾಮಗಳಲ್ಲಿ ಸಂಚರಿಸಿದರು. ಗ್ರಾಮಗಳಲ್ಲಿ ಸರ್ಕಾರ ಹಾಗೂ ಪಂಚಾಯಿತಿಯಿಂದ ಆಗಬೇಕಾದ ಕಾಮಗಾರಿಗಳ ಕುರಿತು ಅಧಿಕಾರಿಗಳ ಮತ್ತು ಗ್ರಾಮದ ಮುಖಂಡರ ಜೊತೆ ಚರ್ಚಿಸಿ, ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಶೀಘ್ರವಾಗಿ ಕ್ರಮ ಜರುಗಿಸುವುದಾಗಿ ತಿಳಿಸಿದರು.

ಅಹವಾಲುಗಳ ಕುರಿತಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 180 ಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದು, ಅವುಗಳಲ್ಲಿ ಕೆಲವುಗಳ ಬಗ್ಗೆ ಕ್ರಮ ಜರುಗಿಸಲಾಯಿತು. ಉಳಿದವುಗಳ ಬಗ್ಗೆ ತಕ್ಷಣ ಕ್ರಮ ಜರುಗಿಸಿ ಜನರ ಮನೆಗೆ ಆದೇಶ ತಲುಪಿಸುವ ಭರವಸೆಯನ್ನು ಶಾಸಕರು ನೀಡಿದರು.

ನೂಕಾಪುರದಿಂದ ನಿರ್ಗಮಿಸಿದ ಶಾಸಕರ ಜೊತೆ ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ ಹಾಗೂ ಕೆಲ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಲಾವಿದರ ಉಳಿಸುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಲಿ

## ವಿಜ್ಞಾನ ಸಂವಹನ ಕಾರ್ಯಾಗಾರದ ಸಮಾರೋಪದಲ್ಲಿ ಡಾ. ಹೆಚ್. ವಿಶ್ವನಾಥ್ ಆಶಯ



ದಾವಣಗೆರೆ, ಏ.4- ಕಾರ್ಯಾಗಾರಗಳ ಮುಖೇನ ಕಲೆ ಮತ್ತು ಕಲಾವಿದರ ಉಳಿಸುವ ಪ್ರಯತ್ನಕ್ಕೆ ಸರ್ಕಾರ ಮುಂದಾಗಬೇಕು ಎಂದು ದಾವಣಗೆರೆ ವಿವಿಯ ಕನ್ನಡ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕ ಡಾ. ಹೆಚ್. ವಿಶ್ವನಾಥ್ ಆಶಿಸಿದರು.

ಅವರು, ಇಂದು ಮಧ್ಯಾಹ್ನ ನಗರದ ಬಿಇಎ ಶಿಕ್ಷಣ ಮಹಾವಿದ್ಯಾನಿಲಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಮಂಡಳಿ ಪ್ರಾಯೋಜಕತ್ವದಲ್ಲಿ ಬೆಳಗಾವಿ ವಿಕಸನ ಕೇಂದ್ರ, ದಾವಣಗೆರೆ ವಿಜ್ಞಾನ ಕೇಂದ್ರದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮೂರು ದಿನಗಳ ಗೀ ಗೀ ಪದ ಮತ್ತು ಜಾನಪದ ಮಾಧ್ಯಮದ ಮೂಲಕ ವಿಜ್ಞಾನ ಸಂವಹನ ಕಾರ್ಯಾಗಾರದ ಸಮಾರೋಪದಲ್ಲಿ ಮಾತನಾಡಿದರು.

ಪ್ರಸ್ತುತ ಚರ್ಮ ವಾದ್ಯ, ದೊಡ್ಡಾಟ, ಸಣ್ಣಾಟ, ಬಯಲಾಟ, ಕಂಸಾಳೆ, ತೊಗಲು ಗೊಂಬೆ ಯಾಟ, ಕೋಲಾಟ ಸೇರಿದಂತೆ ವಿವಿಧ ಜಾನಪದ ಕಲಾ ಪ್ರಕಾರಣಗಳು ಅಳಿವಿನಂಚಿಗೆ ಸಾಗುತ್ತಿವೆ. ಜೊತೆಯಲ್ಲೇ ಇವುಗಳನ್ನು ನಂಬಿ ಬದುಕು ಕಟ್ಟಿಕೊಳ್ಳುತ್ತಿರುವ ಕಲಾವಿದರ ಬದುಕು ಸಂಕ ಷ್ಟಕ್ಕೆ ಸಿಲುಕಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದ್ದರೂ ಸಹ ಜಾನಪದ ಕಲೆ, ರಂಗ ಭೂಮಿ ಮತ್ತು ಕಲಾವಿದರ ಬದುಕು ನೋವಿನಿಂದಲೇ ಸಾಗುತ್ತಿದೆ ಎಂದು ವಿಷಾಧಿಸಿದರು.

ಕಲೆಗಳ ಪ್ರದರ್ಶನಕ್ಕೆ ಸೂಕ್ತ ವೇದಿಕೆ ಸಿಗದೇ ಬಹಳಷ್ಟು ಕಲಾವಿದರು ಒಂದು ಹೊತ್ತಿನ ಊಟಕ್ಕೂ ಪರದಾಡುವಂತಹ ಸ್ಥಿತಿ ನಮ್ಮೆದುರಿಗೆ ಇದೆ. ಸನ್ಮಾನಿಸಲು ವ್ಯಯಿಸುವ ಸಾವಿರಾರು ರೂ.ಗಳ ಖರ್ಚನ್ನು ತಮಗೆ ಆರ್ಥಿಕ ನೆರವಾಗಿ ನೀಡಿದರೆ ಬದುಕಿಗೆ ಆಸರೆಯಾದೀತು ಎಂದು ಕೆಲ ಕಲಾವಿದರು ಬಯಸುತ್ತಾರೆ. ಹಾಗಾಗಿ ಗೌರವ ಧನವಾಗಿ ನೀಡುವ ಮುಖೇನ ಗೌರವಿಸಬೇಕು ಎಂದು ಅಭಿಪ್ರಾಯಪಟ್ಟರು.

ವಿಜ್ಞಾನ ಮತ್ತು ಜಾನಪದ ಪರಿಷತ್ ಕಲಾವಿದರನ್ನು ಗುರುತಿಸಿ, ಅವರಲ್ಲಿನ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸಿಕೊಡಬೇಕು. ಜಾನಪದ ಕಲಾ ಪ್ರಕಾರಗಳು ಮತ್ತು ಕಲಾವಿದರ ಕುರಿತಾದ ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ ಕಲೆ ಉಳಿಸಿ, ಕಲಾವಿದರ ಬದುಕನ್ನು ಹಸನು ಮಾಡುವ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಎಷ್ಟೇ ಬುದ್ಧಿವಂತರಾದರೂ ಮಾನವೀಯ ಮೌಲ್ಯಗಳಿದ್ದಲ್ಲಿ ಮಾತ್ರ ಮನುಷ್ಯನಾಗಿರಲು ಸಾಧ್ಯ. ಕೇವಲ ಪುಸ್ತಕದ ಹುಳುಗಳಾಗಿಸದೇ ಭವಿಷ್ಯವನ್ನು ರೂಪಿಸಿಕೊಳ್ಳುವ ಸಾಮರ್ಥ್ಯ ಬೆಳೆಸಬೇಕು. ಪರಿಪೂರ್ಣ ವಿದ್ಯಾರ್ಥಿಯನ್ನಾಗಿ ರೂಪಿಸಬೇಕು ಎಂದು ಪ್ರಶಿಕ್ಷಣಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿದ್ಯೆ ಸಾಧಕನ ಸ್ವತ್ತು. ನಮ್ಮ ಸುತ್ತಮುತ್ತಲಿನಲ್ಲಿರುವ ಸಾಧಕರನ್ನು ಗುರುತಿಸಬೇಕು. ಬಾಲ ವಿಜ್ಞಾನಿ ಯೋಗಪ್ರಿಯ ವಿಜ್ಞಾನ ಕ್ಷೇತ್ರದಲ್ಲಿ ದೊಡ್ಡ ಸಾಧನೆ ಮಾಡಿದ್ದಾರೆ. ಇಂತಹ ಸ್ಥಳೀಯ ಪ್ರತಿಭೆಗಳಿಗೆ ಪ್ರೋತ್ಸಾಹಿಸುವ ಕೆಲಸ ಮಾಡಬೇಕು ಎಂದರು.

ಐರಣಿ ಚಂದ್ರು ಮತ್ತು ತಂಡ ಜಾನಪದ, ಪರಿಸರ, ವಿಜ್ಞಾನ ಗೀತೆಗಳು ಮತ್ತು ಗೀ ಗೀ ಪದಗಳನ್ನು ಹಾಡಿದರು. ಬಿಇಎ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಕೆ. ಮುರುಗೇಶ್ ಅಧ್ಯಕ್ಷತೆ ವಹಿಸಿದ್ದರು. ಹಿರೇಕೆರೂರು ಕ್ಷೇತ್ರ ಸಮನ್ವಯ ಅಧಿಕಾರಿ ಜಗದೀಶ್ ಬಳೆಗಾರ್, ಜಾನಪದ ಸಾಹಿತಿ ವೀರಣ್ಣ ಅಂಗಡಿ, ಸಂಜಯ್ ಮಗದುಮ್, ಬಾಲ ವಿಜ್ಞಾನಿ ಯೋಗಪ್ರಿಯ, ಟಿ.ಎಂ. ನಿಶಾಂತ್ ಸೇರಿದಂತೆ ಇತರರು ಇದ್ದರು. ಕೆ. ಬಾನಪ್ಪ ಸ್ವಾಗತಿಸಿದರು. ದಾವಣಗೆರೆ ವಿಜ್ಞಾನ ಕೇಂದ್ರದ ಕಾರ್ಯಕ್ರಮ ಸಂಯೋಜಕ ಎಂ. ಗುರುಸಿದ್ಧಸ್ವಾಮಿ ವಂದಿಸಿದರು.

# ಕಾಮಗಾರಿ ಪೂರ್ಣಗೊಂಡು ವರ್ಷ ಕಳೆದರೂ ಅನುದಾನ ಬಿಡುಗಡೆಯಾಗಿಲ್ಲ



## ಹರಪನಹಳ್ಳಿ : ತಾ.ಪಂ. ಅಧ್ಯಕ್ಷ-ಉಪಾಧ್ಯಕ್ಷರ ಅಸಮಾಧಾನ

ಹರಪನಹಳ್ಳಿ, ಏ.4- ಕಾಮಗಾರಿ ಪೂರ್ಣಗೊಂಡು ವರ್ಷ ಕಳೆದರೂ ಅನುದಾನ ಬಿಡುಗಡೆಯಾಗಿಲ್ಲ. ಊರು ಬಿಡುವ ಪರಿಸ್ಥಿತಿ ಎದುರಾಗಿದ್ದು, ಗುತ್ತಿಗೆದಾರರು ಕಾನೂನು ಮೊರೆ ಹೋಗುತ್ತಿದ್ದಾರೆ. ಅಧಿಕಾರಿಗಳು ಜವಾಬ್ದಾರಿ ವಹಿಸದೆ, ಕ್ಷೇತ್ರದ ಅಭಿವೃದ್ಧಿ ಶೂನ್ಯವಾಗುತ್ತಿದೆ ಎಂದು ತಾ.ಪಂ. ಅಧ್ಯಕ್ಷೆ ಅನ್ನಪೂರ್ಣಮ್ಮ, ಉಪಾಧ್ಯಕ್ಷ ಮಂಜ್ಯಾನಾಯ್ಕ ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯ್ತಿಯ ರಾಜೀವ್‌ಗಾಂಧಿ ಸಭಾಂಗಣದಲ್ಲಿ ಮೊನ್ನೆ ನಡೆದ ವಿವಿಧ ಇಲಾಖೆಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕಾರ್ಯನಿರ್ವಹಣಾಧಿಕಾರಿಯ ಗೈರು ಹಾಜರಿಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷರು ತಮ್ಮ ಅಳ ಲನ್ನು ಅಧಿಕಾರಿಗಳ ಮುಂದೆ ತೋಡಿಕೊಂಡರು.

ತಾ.ಪಂ. ಸದಸ್ಯರು ಅನುದಾನದ ಭರವಸೆಯಿಂದ ಕ್ಷೇತ್ರದ ಅಭಿವೃದ್ದಿಗೆ ಗುತ್ತಿಗೆದಾರರಿಂದ ಕೆಲಸ ಮಾಡಿಸಿದ್ದಾರೆ. ಆದರೆ ಅವರಿಗೆ ಅನುದಾನ ಬಿಡುಗಡೆಯಾಗುತ್ತಿಲ್ಲ ಏಕೆ ? ನಮ್ಮ ಹಣೆಬರಹ ಹೇಗಾಗಿದೆ ಎಂದರೆ ಹರಪನಹಳ್ಳಿ ತಾಲ್ಲೂಕು ಬಳ್ಳಾರಿಯಿಂದ ದಾವಣಗೆರೆ, ದಾವಣಗೆರೆಯಿಂದ ಬಳ್ಳಾರಿ, ಇದೀಗ ವಿಜಯನಗರ ಜಿಲ್ಲೆಗೆ ಸೇರ್ಪಡೆಯಾಗಿದೆ. ತಾಲ್ಲೂಕಿನ ಅನುದಾನದ ಬಿಡುಗಡೆಗೆ ಕೆ2 ತಾಂತ್ರಿಕವಾಗಿ ತೊಡಕಾಗಿದೆ ಎಂದು ಅಧ್ಯಕ್ಷರು ಹೇಳಿಕೊಂಡರೆ, ಯಾವುದೋ ನೆಪದಲ್ಲಿ ಅನುದಾನ ಬಾರದಿರುವುದರಿಂದ ನಮ್ಮ ಬದುಕು ಹೇಗೆ ನಡೆಸಬೇಕು ಎಂದು ಉಪಾಧ್ಯಕ್ಷರು ಸಭೆಯಲ್ಲಿ ಕಳವಳ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸುತ್ತಿರುವ ಗ್ರಾಮಗಳಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಕ್ರಮವಹಿಸಲಾಗುತ್ತಿದೆ. ಬಹು ಗ್ರಾಮ ಯೋಜನೆಯಲ್ಲಿ ಆದಷ್ಟು ಬೇಗ ಗ್ರಾಮಗಳಿಗೆ ನೀರನ್ನು ಒದಗಿಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸಲು ತಿಳಿಸಲಾಗುವುದು ಎಂದು ಕುಡಿಯುವ ನೀರು ವಿಭಾಗದ ಎಇಇ ಸಿದ್ಧರಾಜು ಮಾಹಿತಿ ನೀಡಿದರು.

ಕಳೆದ ವರ್ಷದಲ್ಲಿ ರೈತರು ಸಲ್ಲಿಸಿದ ಜಾತಿ ಆದಾಯ ಪತ್ರದಲ್ಲಿನ ಲೋಪದೋಷ ಸರಿಪಡಿಸಿ ಕೊಟ್ಟಲ್ಲಿ ಅವರಿಗೆ ತಾಡಪಾಲ್ ಕೊಡಲಾಗುವುದು. ಈ ಬಾರಿಯು ಫಲಾನುಭವಿಗಳ ಪಟ್ಟಿ ನೀಡಿದಲ್ಲಿ ಹಂಚಿಕೆ ಮಾಡಲಾಗುವುದು ಎಂದು ಕೃಷಿ ಅಧಿಕಾರಿ ಮಂಜುನಾಥ ಗೊಂದಿ ಸಭೆಗೆ ಮಾಹಿತಿ ನೀಡಿದರು.

ಸಾರ್ವಜನಿಕ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಯಂತ್ರಗಳ ದುರಸ್ತಿಯನ್ನು ಸಕಾಲದಲ್ಲಿ ಮಾಡಿಸದೆ ರೋಗಿಗಳಿಗೆ ತೊಂದರೆಯಾಗಿದೆ. ಕಣ್ಣಿನ ವೈದ್ಯರು ಕಳೆದ ಆರು ತಿಂಗಳಿಂದಲೂ ಆಸ್ಪತ್ರೆಯಲ್ಲಿ ಲಭ್ಯವಿಲ್ಲ. ಬಡ ರೋಗಿಗಳು ಖಾಸಗಿ ಆಸ್ಪತ್ರೆಯಲ್ಲಿ ದುಬಾರಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ. ಕೂಡಲೇ ಸರಿಪಡಿಸಿ ಎಂದು ಸಾರ್ವಜನಿಕ ಆಸ್ಪತ್ರೆ ಅಧಿಕಾರಿಗೆ ಸೂಚಿಸಿದರು.

ತಾಲ್ಲೂಕಿನಲ್ಲಿ 13 ಸಾವಿರಕ್ಕೂ ಅಧಿಕ ಸಾರ್ವಜನಿಕರು ಕೊರೊನಾ ಲಸಿಕೆ ಪಡೆದಿದ್ದಾರೆ. ಮಾ.1ರಿಂದ ತಾಲ್ಲೂಕಿನಲ್ಲಿ 22 ಕೊರೊನಾ ಪಾಸಿಟಿವ್ ರೋಗಿಗಳು ಪತ್ತೆಯಾಗಿದ್ದಾರೆ. ಅವರುಗಳಿಗೆ ಹೋಂ ಕ್ವಾರಂಟೈನ್ ಮಾಡಲಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆ ಸಿಬ್ಬಂದಿ ಮಾಹಿತಿ ನೀಡಿದರು.

ಶಿಕ್ಷಣ ಇಲಾಖೆ, ತೋಟಗಾರಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಯೋಜನಾಧಿಕಾರಿ ವಿಜಯಕುಮಾರ್ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

# ಸಿ. ಎ. ನಿರಂಜನ್ ಅವರಿಗೆ ಪಿ.ಹೆಚ್.ಡಿ.



ದಾವಣಗೆರೆ, ಏ.4- ನಗರದ ಸಿ. ಎ. ನಿರಂಜನ್ ಅವರಿಗೆ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದಿಂದ ಪಿ. ಹೆಚ್.ಡಿ. ಪದವಿ ಲಭಿಸಿದೆ.

'ಮಾಡೆಲಿಂಗ್ ಅಂಡ್ ಅನಾಲಿಸಿಸ್ ಡೆಪ್ತ್ ಆಫ್ ಪೆನೆಟ್ರೇಷನ್ ಅಂಡ್ ಸರ್ಫೇಸ್ ಇನ್ ಕಟಿಂಗ್ ಮ್ಯಾಗ್ನಿಷಿಯಂ ನ್ಯಾನೋ ಕಂಪೋಸಿಟ್ಸ್ ಯೂಸಿಂಗ್ ಅಬ್ರೇಸಿವ್ ವಾಟರ್ ಜೆಟ್' ವಿಷಯ ಕುರಿತು ಬಿ. ಎಂ. ಎಸ್. ಕಾಲೇಜ್ ಆಫ್ ಎಂಜಿನಿಯರಿಂಗ್ ಯಾಂತ್ರಿಕ ವಿಭಾಗದ ಪ್ರೊ. ಡಾ. ಎಸ್. ಶ್ರೀನಿವಾಸ್ ಹಾಗೂ ಪ್ರೊ. ಡಾ. ಎಂ. ರಾಮಚಂದ್ರ ಅವರುಗಳ ಮಾರ್ಗದರ್ಶನದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ನಿರಂಜನ್ ಅವರಿಗೆ ವಿಟಿಯು ಈ ಪದವಿ ನೀಡಿದೆ.

ನಿರಂಜನ್, ನಗರದ ಜ್ಯೋತಿಷಿ ಡಾ. ಸಿ. ಕೆ. ಆನಂದತೀರ್ಥಾಚಾರ್ ಮತ್ತು ಶ್ರೀಮತಿ ವೀಣಾ ದಂಪತಿ ಪುತ್ರ.



## ಯಲವಟ್ಟಿಯಲ್ಲಿ ಸಂಭ್ರಮದ ರಥೋತ್ಸವ

ಮಲೇಬೆನ್ನೂರು, ಏ. 4 - ಯಲವಟ್ಟಿ ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವವು ಭಾನುವಾರ ಬೆಳಗಿನ ಜಾವ ಸಂಭ್ರಮದಿಂದ ಜರುಗಿತು. ಸಂಜೆ ನಡೆದ ಸ್ವಾಮಿಯ ಮುಳ್ಳೋತ್ಸವಕ್ಕೆ ಅಪಾರ ಭಕ್ತರು ಸಾಕ್ಷಿಯಾದರು.

# ಪಾದಯಾತ್ರೆಗೆ ತಿರುವು ನೀಡಿದ್ದ ಹರಪನಹಳ್ಳಿ



## ಶರಣು ಶರಣಾರ್ಥಿ ಕಾರ್ಯಕ್ರಮದಲ್ಲಿ ಬಸವ ಜಯ ಮೃತ್ಯುಂಜಯ ಶ್ರೀ

ಹರಪನಹಳ್ಳಿ, ಏ.4- ಪಂಚಮಸಾಲಿ ಪೀಠದ ಉಭಯ ಶ್ರೀಗಳ ಸಮಾಗಮಕ್ಕೆ ಸಾಕ್ಷಿಯಾದ ಹರಪನಹಳ್ಳಿ, ನಮ್ಮ ಪಾದಯಾತ್ರೆಗೆ ಹೊಸ ತಿರುವನ್ನು ನೀಡಿದೆ ಎಂದು ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದ ಪಂಚಮಸಾಲಿ ಪತ್ತಿನ ಸಹಕಾರಿ ಬ್ಯಾಂಕ್ ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ಶರಣು ಶರಣಾರ್ಥಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕರ್ನಾಟಕದ ಇತಿಹಾಸದಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಜರುಗಿದ ಪಂಚಮಸಾಲಿ ಸಮಾಜದ ಸಮಾವೇಶ ಮೈಲಿಗಲ್ಲಾಗಿದೆ. ಐತಿಹಾಸಿಕ ಪಂಚಮಸಾಲಿ ಬೃಹತ್ ಸಮ್ಮೇಳನದ ಬಳಿಕ ಸುಪ್ರೀಂ ಕೋರ್ಟ್ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಲು ಸಮಾಜದ ಚಳುವಳಿಯೇ ಕಾರಣ ಎಂದು ಹೇಳಿದರೆ ತಪ್ಪಾಗಲಾರದು ಎಂದರು.

ಅಖಿಲ ಭಾರತ ಲಿಂಗಾಯಿತ ಪಂಚಮಸಾಲಿ ಅಧ್ಯಕ್ಷ ಡಾ. ವಿಜಯನಂದ ಕಾಶಪ್ಪನವರ್ ಮಾತನಾಡಿ, ಸರ್ಕಾರ ಸೆಪ್ಟಂಬರ್ 15ರ ನಂತರ ಮೀಸಲಾತಿ ಘೋಷಿಸದಿದ್ದರೆ ಮತ್ತೆ ಉಗ್ರ ಹೋರಾಟ ಮಾಡಿ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸುತ್ತೇವೆ ಎಂದರು.

ಹಡಗಲಿ ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಅಕ್ಷರ ಸೀಡ್ಸ್ ಮಾಲೀಕ ಅರಸಿಕೇರಿ ಎನ್. ಕೊಟ್ರೇಶ್, ಕಂಚಿಕೇರಿ ಎಂ.ಟಿ. ಸುಭಾಶ್‌ಚಂದ್ರ, ಸಾರಿಗೆ ನಿಗಮದ ನಿರ್ದೇಶಕ ಆರುಂಡಿ ನಾಗರಾಜ್, ಬಳ್ಳಾರಿ ಜಿಲ್ಲಾ ಟಾಸ್ಕ್‌ಫೋರ್ಸ್ ಸದಸ್ಯ ಶಶಿಧರ ಪೂಜಾರ, 2ಎ ಮೀಸಲಾತಿ ಹೋರಾಟ ಸಮಿತಿ ತಾಲ್ಲೂಕು ಅಧ್ಯಕ್ಷ ಚಂದ್ರಶೇಖರ ಪೂಜಾರ, ಗೌರವಾಧ್ಯಕ್ಷ ಎಂ.ಪರಮೇಶ್ವರಪ್ಪ, ಪ್ರಚಾರ ಸಮಿತಿ ಅಧ್ಯಕ್ಷ ಪಿ.ಕರಿಬಸಪ್ಪ, ಕಾರ್ಯದರ್ಶಿ ಬಸವರಾಜ ಅಡವಿಹಳ್ಳಿ, ತಿಮ್ಲಾಪುರ ನಾಗರಾಜ, ಬಳ್ಳಾರಿ ಜಿಲ್ಲಾಧ್ಯಕ್ಷ ಭದ್ರವಾಡಿ ಚಂದ್ರಶೇಖರ್, ದಾವಣಗೆರೆ ಜಿಲ್ಲಾಧ್ಯಕ್ಷ ಆರ್.ವಿ. ಅಶೋಕ ಗೋಪನಾಳ್, ಪುರಸಭೆ ಮಾಜಿ ಅಧ್ಯಕ್ಷೆ ಪುಷ್ಪ ದಿವಾಕರ್, ಮುಖಂಡರುಗಳಾದ ಕುಂಚೂರು ಎ. ವೀರಣ್ಣ, ಪೂಜಾರ ಮಂಜಣ್ಣ, ನೀಲಗುಂದ ಸಿದ್ದಲಿಂಗಪ್ಪ, ವಿಜಯ ದಿವಾಕರ್, ಬೋರ್‌ವೆಲ್ ಶಂಭಣ್ಣ, ಹಾರಕನಾಳು ಪ್ರಕಾಶ ಗೌಡ, ಲೀಲಾ ಲಿಂಗರಾಜ್, ಚಿಗಟೇರಿ ಗಾಯ ತ್ರಮ್ಮ ಸಿದ್ದಲಿಂಗನ ಗೌಡ ಇನ್ನಿತರರಿದ್ದರು.

# ಅನಧಿಕೃತವಾಗಿ ತಲೆ ಎತ್ತಿದ ಪ್ರಾರ್ಥನಾ ಮಂದಿರ: ಆರೋಪ

## ಪೊಲೀಸರೊಂದಿಗೆ ಹಿಂಜಾವೇ ದಿಢೀರ್ ದಾಳಿ

ದಾವಣಗೆರೆ, ಏ.4- ಪರವಾನಗಿ ಇಲ್ಲದೇ ಪ್ರಾರ್ಥನಾ ಮಂದಿರ ನಡೆಸುತ್ತಿರುವುದಾಗಿ ಆರೋಪಿಸಿ, ನಗರದ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ಪೊಲೀಸರೊಂದಿಗೆ ದಿಢೀರ್ ದಾಳಿ ನಡೆಸಿರುವ ಘಟನೆ ಇಂದು ನಡೆದಿದೆ.

ವಿದ್ಯಾನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದವೀರಪ್ಪ ಬಡಾವಣೆಯ ಎಲ್.ಜಿ. ಕಾಂಪ್ಲೆಕ್ಸ್‌ನಲ್ಲಿ ರಾಜಾರೋಷವಾಗಿ ಬೋರ್ಡ್ ಹಾಕಿಕೊಂಡು ಪರವಾನಗಿ ಇಲ್ಲದೇ ಅನಧಿಕೃತವಾಗಿ ಪ್ರಾರ್ಥನಾ ಮಂದಿರ ನಡೆಸುತ್ತಿದ್ದು, ಮತಾಂತರಕ್ಕಾಗಿ ಪ್ರಾರ್ಥನಾ ಮಂದಿರದ ಚಟುವಟಿಕೆಗಳು ನಡೆಯುತ್ತಿವೆ ಎಂದು ಆರೋಪಿಸಿ ಪೊಲೀಸರೊಂದಿಗೆ ಪ್ರಾರ್ಥನಾ ಮಂದಿರಕ್ಕೆ ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರು ದಿಢೀರ್ ದಾಳಿ ನಡೆಸಿದ್ದಾರೆ. 100 ಕ್ಕೂ ಹೆಚ್ಚು ಮಹಿಳೆಯರು ಮಾಸ್ಕ್ ಇಲ್ಲದೇ, ಸಾಮಾಜಿಕ ಅಂತರವಿಲ್ಲದೇ ಪ್ರಾರ್ಥನೆ ನಡೆಸುತ್ತಿದ್ದನ್ನು ತಡೆಯಲು ಮುಂದಾದ ಹಿಂಜಾವೇ ಕಾರ್ಯಕರ್ತರ ಹಾಗೂ ಪ್ರಾರ್ಥನೆ ಮಾಡುತ್ತಿದ್ದ ಮಹಿಳೆಯರ ಮಧ್ಯೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ.

ಪ್ರಾರ್ಥನಾ ಮಂದಿರದ ದಾಖಲೆಗಳನ್ನು ಸಲ್ಲಿಸುವಂತೆ, ವಿದ್ಯಾನಗರ ಪೊಲೀಸರು ಸೂಚನೆ ನೀಡಿದ್ದಾರೆಂದು ಹೇಳಲಾಗಿದೆ.

# ದೇಶದಲ್ಲಿ ಒಂದೇ ದಿನ 93 ಸಾವಿರ ಸೋಂಕಿತರು


ನವದೆಹಲಿ, ಏ. 4 - ದೇಶದಲ್ಲಿ ಒಂದೇ ದಿನ 93,249 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನ 513 ಜನರು ಸಾವನ್ನಪ್ಪಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಕಳೆದ 25 ದಿನಗಳಿಂದ ನಿರಂತರವಾಗಿ ಸಕ್ರಿಯ ಸೋಂಕಿತರ ಸಂಖ್ಯೆ ಹೆಚ್ಚಾಗಿದ್ದು, 6.91 ಲಕ್ಷಕ್ಕೆ ತಲುಪಿದೆ.

# ಛತ್ತೀಸ್‌ಘಡದ ದುರ್ಗಮ ಪ್ರದೇಶಗಳಲ್ಲಿ ಭದ್ರತಾ ಶಿಬಿರ

ರಾಯಪುರ, ಏ. 4 - ಛತ್ತೀಸ್‌ಘಡದಲ್ಲಿರುವ ದುರ್ಗಮ ಪ್ರದೇಶಗಳಲ್ಲಿ ಭದ್ರತಾ ಶಿಬಿರಗಳನ್ನು ಸ್ಥಾಪಿಸಲಾಗುವುದು ಹಾಗೂ ನಕ್ಸಲರ ವಿರುದ್ಧ ಹೆಚ್ಚು ಗಂಭೀರ ಕಾರ್ಯಾಚರಣೆ ನಡೆಸಲಾಗುವುದು ಎಂದು ಸಿಆರ್‌ಪಿಎಫ್ ಪ್ರಧಾನ ನಿರ್ದೇಶಕ ಕುಲ್‌ದೀಪ್ ಸಿಂಗ್ ತಿಳಿಸಿದ್ದಾರೆ.

ಪ್ರತಿ ಘಟನೆಯಿಂದ ಪಾಠಗಳನ್ನು ಕಲಿಯಬೇಕಿದೆ. ನಕ್ಸಲರು ಮಾಡಿಕೊಂಡಿರುವ ಬದಲಾವಣೆಗಳ ವಿಶ್ಲೇಷಣೆ ಮಾಡಿ ಪರಿಣಾಮಕಾರಿಯಾಗಿ ಎದುರಿಸುತ್ತೇವೆ ಎಂದವರು ಹೇಳಿದ್ದಾರೆ. ನಕ್ಸಲರ ದಾಳಿಯಲ್ಲಿ 22 ಭದ್ರತಾ ಸಿಬ್ಬಂದಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಅವರು ರಾಜ್ಯಕ್ಕೆ ಭೇಟಿ ನೀಡಿದ್ದರು. ನಕ್ಸಲ್ ದಾಳಿಯ ಪರಿಸ್ಥಿತಿ ಕುರಿತು ಅವರು ವಿವರ ಪಡೆದಿದ್ದಾರೆ.

# ಯುವ ಪೀಳಿಗೆಗೆ ಸ್ವಾತಂತ್ರ್ಯ ಇತಿಹಾಸದ ಅರಿವು ಅಗತ್ಯ



## ಜಗಳೂರಿನಲ್ಲಿ ಶಾಸಕ ಎಸ್.ವಿ.ಆರ್

ಜಗಳೂರು, ಏ.4 - ದೇಶದ ಸ್ವಾತಂತ್ರ್ಯಕ್ಕಾಗಿ ಜೀವನ ಮುಡಿಪಾಗಿಟ್ಟು ಹೋರಾಡಿದ ಮಹನೀಯರ ಆದರ್ಶಗಳ ಬಗ್ಗೆ ವಿದ್ಯಾರ್ಥಿ, ಯುವ ಸಮೂಹದಲ್ಲಿ ಅರಿವು ಮೂಡಿಸುವುದು ಅಗತ್ಯ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್ .ವಿ.ರಾಮಚಂದ್ರ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ದಾವಣಗೆರೆ ಹಾಗೂ ತಾಲ್ಲೂಕು ಆಡಳಿತ, ಪಟ್ಟಣ ಪಂಚಾಯಿತಿ ಜಗಳೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶಕ್ಕಾಗಿ ಪ್ರಾಣವನ್ನೇ ಮುಡಿಪಾಗಿಟ್ಟು ಮಹಾತ್ಮ ಗಾಂಧಿಜೀ, ಸೇರಿದಂತೆ ಅನೇಕ ಮಹನೀಯರ ಅಹಿಂಸಾ ಮಾರ್ಗದ ಹೋರಾಟದ ಫಲವಾಗಿ ಸ್ವಾತಂತ್ರ್ಯ ದೊರೆತಿದೆ. ಡಾ.ಬಿ. ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನದ ಕೊಡುಗೆಯಿಂದ ದೇಶ ಸುವ್ಯವಸ್ಥಿತ ಪ್ರಜಾಪ್ರಭುತ್ವ ಆಡಳಿತ ಹೊಂದಿದೆ. ಅಲ್ಲದೆ ನನ್ನನ್ನೊಳಗೊಂಡಂತೆ ಜನಪ್ರತಿನಿಧಿಗಳು ಆಯ್ಕೆಯಾಗಿದ್ದೇವೆ. ಅತ್ಯುನ್ನತ ಶಿಕ್ಷಣ ಪಡೆದ ಬಾಬಾಸಾಹೇಬರಂತಹ ಮಹಾಪುರುಷರಿಗೆ ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಸಲಹೆ ನೀಡಿದರು.

**ನೀರಾವರಿ ಕನಸು ನನಸು; ರೈತರ ಬದುಕು ಹಸನ:** ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ 57 ಕೆರೆ ನೀರು ತುಂಬಿಸುವ ಯೋಜನೆ ಕಾಮಗಾರಿ ಭರದಿಂದ ಸಾಗಿದ್ದು ಶೀಘ್ರದಲ್ಲಿ ಕೆರೆಗಳಿಗೆ ನೀರು ಭರ್ತಿಯಾಗಲಿದೆ ಹಾಗೂ ಕನಸಿನ ಕೂಸಾದ ಭದ್ರಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರ್ಕಾರ ರಾಷ್ಟ್ರೀಯ ಯೋಜನೆಯನ್ನಾಗಿ ಅನುಮೋದನೆ ನೀಡಿದ ಫಲವಾಗಿ ತಾಲ್ಲೂಕಿಗೆ 1200 ಕೋಟಿ ರೂ ಅನುದಾನ ದೊರೆಯಲಿದೆ. 2.4 ಟಿಎಂಸಿ ನೀರು ಹರಿದುಬರಲಿದ್ದು 45 ಸಾವಿರ ಎಕರೆ ಪ್ರದೇಶ ಹನಿನೀರಾವರಿಯಾಗಲಿದೆ. 9 ಕೆರೆಗಳು ಮೈದುಂಬಲಿವೆ. ಇದರಿಂದ ತಾಲ್ಲೂಕು ಹಸಿರು ನಾಡಾಗಿ ಕಂಗೊಳಿಸಿ ದಶಕಗಳ ಕನಸು ನನಸಾಗಿ ರೈತರ ಬದುಕು ಹಸನಾಗಲಿದೆ ಎಂದು ಶಾಸಕರು ವಿಶ್ವಾಸ ವ್ಯಕ್ತಪಡಿಸಿದರು.

ಕೊರೊನಾ ಪುನಃ ಆಕ್ರಮಿಸುತ್ತಿದ್ದು ಜಾಗೃತರಾಗಿರಿ. ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಿ. ಪುನಃ ಲಾಕ್ ಡೌನ್ ಹಂತ ತಲುಪುವುದು ಬೇಡ ಮುಂಜಾಗ್ರತೆ ವಹಿಸಿರಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣ ಪಂಚಾಯಿತಿಯಿಂದ ಮಹಾತ್ಮಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಪಂಚಾಯಿತಿವರೆಗೆ ಘೋಷವಾಕ್ಯವುಳ್ಳ ಪ್ಲ ಕಾರ್ಡ್‌ಗಳನ್ನು ಹಿಡಿದು ಜಾಥಾ ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿ.ಪಂ ಸದಸ್ಯ ಎಸ್. ಕೆ.ಮಂಜುನಾಥ್, ಪ.ಪಂ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತಾ ಶಿವಣ್ಣ, ತಾ.ಪಂ ಸದಸ್ಯರಾದ ಮರೇನಹಳ್ಳಿ ಬಸವರಾಜ್, ಶಂಕರನಾಯ್ಕ, ತಿಮ್ಮೇಶ್, ಪ.ಪಂ ಸದಸ್ಯರಾದ ಪಾಪಲಿಂಗಪ್ಪ, ರೇವಣ್ಣ, ಮಂಜಮ್ಮ, ಲುಕ್ಮಾನ್‌ಖಾನ್, ಲೋಲಾಕ್ಷಮ್ಮ, ವಿಶಾಲಾಕ್ಷಿ, ನಿರ್ಮಲ, ನಾಮನಿರ್ದೇಶನ ಸದಸ್ಯರಾದ ರುದ್ರಮುನಿ, ಬಿ.ಪಿ ಸುಭಾನ್, ತಹಶೀಲ್ದಾರ್ ಡಾ.ನಾಗವೇಣಿ, ತಾ.ಪಂ ಇಓ ಮಲ್ಲಾನಾಯ್ಕ, ಪ.ಪಂ ಮುಖ್ಯಾಧಿಕಾರಿ ರಾಜು.ಡಿ ಬಣಕಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿಗಳು ಭಾಗವಹಿಸಿದ್ದರು.

# ನಗರದಲ್ಲಿ ಇಂದು 'ಬರವಣಿಗೆಯಲ್ಲಿ ಸರಿಗನ್ನಡ ಅಭಿಯಾನ 2021'

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಇಂದು ಮಧ್ಯಾಹ್ನ 3 ಗಂಟೆಗೆ ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗಾಗಿ 'ಬರವಣಿಗೆಯಲ್ಲಿ ಸರಿಗನ್ನಡ ಅಭಿಯಾನ 2021' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ ಅಧ್ಯಕ್ಷತೆ ವಹಿಸುವರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಜಿ. ಈಶ್ವರಪ್ಪ ಉಪನ್ಯಾಸ ನೀಡಲಿದ್ದಾರೆ. ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆ ಮುಖ್ಯೋಪಾಧ್ಯಾಯರಾದ ಶ್ರೀಮತಿ ಜಸ್ಟಿನ್ ಡಿ.ಸೌಜ, ಸಾಹಿತಿ ಬಾಮ ಬಸವರಾಜಯ್ಯ, ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಚಂದ್ರಣ್ಣ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಪುರಸ್ಕೃತ ಪೆ.ನಾ. ಗೋಪಾಲರಾವ್ ಹಾಗೂ ಯಳನಾಡು ಮಂಜುನಾಥ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಗುವುದು.

# ಮಲೇಬೆನ್ನೂರು : ಇಂದು ಸಾಮಾನ್ಯ ಸಭೆ

ಇಲ್ಲಿನ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಪುರಸಭೆ ಅಧ್ಯಕ್ಷರಾದ ಶ್ರೀಮತಿ ಪಾನಿಪೂರಿ ರಂಗನಾಥ್ ಅವರ ಅಧ್ಯಕ್ಷತೆಯಲ್ಲಿ ಪುರಸಭೆಯ ವಿಶೇಷ ಸಾಮಾನ್ಯ ಸಭೆ ಕರೆಯಲಾಗಿದೆ ಎಂದು ಪ್ರಭಾರ ಮುಖ್ಯಾಧಿಕಾರಿ ದಿನಕರ್ ತಿಳಿಸಿದ್ದಾರೆ.

# ಮಾಸ್ಕ್, ನಿಯಂತ್ರಣ ಕ್ರಮ ಇಲ್ಲದೇ ಕೊರೊನಾ ಹರಡಿದೆ



**ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸಭೆಯಲ್ಲಿ ಐದು ಅಂಶಗಳ ಕ್ರಮಕ್ಕೆ ನಿರ್ಧಾರ**

ನವದೆಹಲಿ, ಏ. 4 - ಮಾಸ್ಕ್ ಹಾಕದಿರುವುದು, ಮಹಾ ಮಾರಿಯಿಂದ ಬೇಸತ್ತಿರುವುದು ಹಾಗೂ ನಿಯಂತ್ರಣ ಕ್ರಮಗಳನ್ನು ಸೂಕ್ತ ರೀತಿಯಲ್ಲಿ ತೆಗೆದುಕೊಳ್ಳದೇ ಇರುವುದು ಕೊರೊನಾ ಹರಡಲು ಪ್ರಮುಖ ಕಾರಣವಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೊರೊನಾ ಪರಿಸ್ಥಿತಿಯ ಕುರಿತು ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಈ ಅಭಿಪ್ರಾಯ ತಿಳಿಸಲಾಗಿದೆ.

ಪರೀಕ್ಷೆ ಹೆಚ್ಚಿಸುವುದು, ಸೋಂಕಿತರ ಪತ್ತೆ, ಚಿಕಿತ್ಸೆ, ಕೊರೊನಾ ನಿಯಮಗಳ ಪಾಲನೆ ಹಾಗೂ ಲಸಿಕೆಯ ಐದು ಅಂಶಗಳ ಕ್ರಮದಿಂದ ಕೊರೊನಾ ತಡೆಯಲು ಸಾಧ್ಯ ಎಂದು ಮೋದಿ ತಿಳಿಸಿದ್ದಾರೆ.

ಕೊರೊನಾ ಪ್ರಕರಣಗಳು ಹಾಗೂ ಸಾವುಗಳು 10 ರಾಜ್ಯಗಳಲ್ಲಿ ಗಣನೀಯವಾಗಿ ಹೆಚ್ಚಾಗಿವೆ. ಈ ರಾಜ್ಯಗಳಲ್ಲೇ ಶೇ.91 ರಷ್ಟು ಸೋಂಕಿತರಿದ್ದು, ಸಾವುಗಳು ಸಂಭವಿಸಿವೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಲಸಿಕೆ ಉತ್ಪಾದಕರು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದಾರೆ. ಲಸಿಕೆ ಉತ್ಪಾದನೆ ಹೆಚ್ಚಿಸಲು ಇತರೆ ದೇಶೀಯ ಹಾಗೂ ಹೊರದೇಶದ ಕಂಪನಿಗಳ ಜೊತೆ ಚರ್ಚೆಯನ್ನೂ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ. ಮಹಾರಾಷ್ಟ್ರ, ಪಂಜಾಬ್ ಹಾಗೂ ಛತ್ತೀಸ್‌ಘಡಗಳಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಈ ರಾಜ್ಯಗಳಲ್ಲಿ ಕಳೆದ 14 ದಿನಗಳಲ್ಲಿ ಶೇ.57ರಷ್ಟು ಸೋಂಕುಗಳು ಹಾಗೂ ಶೇ.47ರಷ್ಟು ಸಾವುಗಳು ಸಂಭವಿಸಿವೆ.

ಮಹಾರಾಷ್ಟ್ರದಲ್ಲಿ ಒಂದೇ ದಿನ 47,913 ಸೋಂಕಿತರು ಕಂಡು ಬಂದಿದ್ದಾರೆ. ಇದು ಕಳೆದ ವಾರಕ್ಕೆ ಹೋಲಿಸಿದರೆ ಎರಡು ಪಟ್ಟು ಹೆಚ್ಚಾಗಿದೆ.

ಪಂಜಾಬ್‌ನಲ್ಲಿ ಒಟ್ಟು ಸೋಂಕುಗಳ ಶೇ.4.5ರಷ್ಟಿದೆ ಹಾಗೂ ಸಾವುಗಳ ಪ್ರಮಾಣ ಶೇ.16.3ರಷ್ಟಿದೆ. ಇದು ಗಂಭೀರ ಕಳವಳಕ್ಕೆ ಕಾರಣವಾಗಿದೆ.

ಛತ್ತೀಸ್‌ಘಡದಲ್ಲಿ ಕಳೆದ 14 ದಿನಗಳಲ್ಲಿ ಒಟ್ಟು ಸೋಂಕಿನ ಶೇ.4.3ರಷ್ಟಿದೆ. ಆದರೆ, ಸಾವಿನ ಪ್ರಮಾಣ ಶೇ.7 ದಾಟಿದೆ.

ಸಾರ್ವಜನಿಕ ಆರೋಗ್ಯ ಪರಿಣಿತರು ಹಾಗೂ ವೈದ್ಯಕೀಯ ಪರಿಣಿತರು ಸೇರಿದಂತೆ ಕೇಂದ್ರದ ತಂಡಗಳನ್ನು ಮಹಾರಾಷ್ಟ್ರ, ಪಂಜಾಬ್ ಹಾಗೂ ಛತ್ತೀಸ್‌ಘಡಗಳಿಗೆ ಕಳಿಸಬೇಕು ಎಂದು ಪ್ರಧಾನಿ ಮೋದಿ ಸೂಚನೆ ನೀಡಿದ್ದಾರೆ.

ಕೊರೊನಾ ತಡೆಯುವಲ್ಲಿ ಅರಿವು ಮೂಡಿಸುವ ಅಗತ್ಯವಿದೆ. ಜನರ ಸಹಭಾಗಿತ್ವ ಹಾಗೂ ಜನಾಂದೋಲನದ ಅಗತ್ಯವಿದೆ.

ಇದಕ್ಕಾಗಿ ಏಪ್ರಿಲ್ 6-14ರವರೆಗೆ ಸಾರ್ವಜನಿಕ ಸ್ಥಳಗಳು, ಕೆಲಸದ ಸ್ಥಳಗಳು ಹಾಗೂ ಆಸ್ಪತ್ರೆಗಳಲ್ಲಿ ಕೊರೊನಾ ಅರಿವಿನ ಅಭಿಯಾನ ನಡೆಸಬೇಕು ಎಂದು ಪ್ರಧಾನಿ ತಿಳಿಸಿದ್ದಾರೆ.

# ಕೋವಿಡ್ ಅಲೆ ನಿಭಾಯಿಸುವಲ್ಲಿ ಬಿಜೆಪಿ ಸರ್ಕಾರ ವಿಫಲ

**ಹರಪನಹಳ್ಳಿಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್**



ಹರಪನಹಳ್ಳಿ, ಏ.4- ಬಿಜೆಪಿ ನೇತೃತ್ವದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭ್ರಷ್ಟಾಚಾರದಿಂದ ಕೂಡಿದ್ದು, ಗೊತ್ತು ಗುರಿ ಇಲ್ಲದ ಸರ್ಕಾರಗಳಾಗಿವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಆರೋಪಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, ಕೋವಿಡ್ ಎರಡನೇ ಆಲೆ ನಿಭಾಯಿಸುವಲ್ಲಿ ರಾಜ್ಯ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕೋವಿಡ್ ವಿಚಾರದಲ್ಲಿ ಸಚಿವರು ದಿನಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ ಎಂದ ಅವರು, ಕೇಂದ್ರ ಸರ್ಕಾರ ಪ್ರತಿ ವರ್ಷ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದು ಹೇಳಿ ಈಗ ಎಲ್ಲಿ ಕೊಟ್ಟಿದೆ, ಕಪ್ಪು ಹಣ ತರುತ್ತೇವೆ ಎಂದು ಸುಳ್ಳು ಹೇಳುತ್ತಾ ಸಾಗಿದೆ. ಜನರು ಸಹ ಈ ಸರ್ಕಾರಗಳ ವಿರುದ್ಧ ಭ್ರಮ ನಿರಸನ ಗೊಂಡಿದ್ದಾರೆ ಎಂದು ಟೀಕಿಸಿದರು.

ರಾಜ್ಯ ಸರ್ಕಾರದ ಕಾರ್ಯವೈಖರಿ ಕುರಿತು ಸಚಿವ ಈಶ್ವರಪ್ಪ ನವರು ರಾಜ್ಯ ಪಾಲರಿಗೆ ಪತ್ರ ಬರೆದಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಅವರು ಈಶ್ವರಪ್ಪನವರನ್ನು ಸಂಪುಟದಿಂದ ವಜಾ ಮಾಡಬೇಕು. ಇಲ್ಲದಿದ್ದರೆ ಅವರೇ ರಾಜಿನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಲಿಷ್ಠವಾಗಿದೆ. ಜನಧ್ವನಿ ಮೂಲಕ 100 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಬಲಪಡಿಸಲು ಯೋಜನೆ ಹಾಕಿಕೊಳ್ಳಲಾಗಿದೆ ಎಂದ ಅವರು, ಏ.30 ರೊಳಗೆ ಪಂಚಾಯ್ತಿ ಸಮಿತಿ, ವಾರ್ಡ್ ಸಮಿತಿ, ನಂತರ ಬೂತ್ ಮಟ್ಟದ ಸಮಿತಿಗಳನ್ನು ರಚಿಸಲಾಗುವುದು ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಸಿದ್ದಾಂತ, ಕಾರ್ಯಕ್ರಮಗಳ ಅರಿವು ಮೂಡಿಸಲು ಶೀಘ್ರ ಕಾಂಗ್ರೆಸ್ ಕಾರ್ಯಕರ್ತರಿಗೆ ತರಬೇತಿ ಶಿಬಿರ ಸಹ ಹಮ್ಮಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಒಂದು ಲೋಕಸಭಾ ಹಾಗೂ ಎರಡು ವಿಧಾನ ಸಭಾ ಒಟ್ಟು 3 ಕ್ಷೇತ್ರಗಳಿಗೆ ಈಗ ನಡೆಯುತ್ತಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ. 2023 ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಕೆ.ಪಿ.ಸಿ.ಸಿ ವಕ್ತಾರ, ಡಿ.ಬಸವರಾಜ್, ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶಿವಯೋಗಿ, ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಎಂ.ಪಿ.ಲತಾ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ.ವೀಣಾ, ಯುವ ಕಾಂಗ್ರೆಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಟಿ.ಭರತ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಅಹಿಂದ ಪರಿಷತ್ ಅಧ್ಯಕ್ಷ ಉಮೇಶ್ ಬಾಬು, ರಾಜ್ಯ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಸಂಯೋಜಕ ಬಿ. ನಜೀರ್, ಅಲ್ಪಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ್, ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಶಿವರಾಜ್, ಜಿ.ಪಂ ಸದಸ್ಯ ಹೆಚ್ .ಬಿ.ಪರಶುರಾಮಪ್ಪ, ಮುಖಂಡರಾದ ಶಶಿಧರ್ ಪೂಜಾರ್, ಪ್ರಕಾಶ್ ಪಾಟೀಲ್, ಎಂ.ಟಿ.ಬಸವನಗೌಡ ಡಾ.ಉಮೇಶ್ ಬಾಬು, ಪಿ.ಎಲ್.ಪೋಮ್ಯನಾಯ್ಕ, ಪುರಸಭಾ ಸದಸ್ಯರುಗಳಾದ ಟಿ.ವೆಂಕಟೇಶ್, ಎಂ.ವಿ.ಅಂಜಿನಪ್ಪ, ಜಾಕೀರ್, ಲಾಟಿ ದಾದಾಪೀರ್ ಭರತೇಶ್, ಕೊಟ್ರೇಶ್, ಎಂ.ಟಿ.ಬಸವನಗೌಡ, ಕಂಚಿಕೇರಿ ಪಿ.ಜಯಲಕ್ಷ್ಮಿ, ಎಲ್.ಮಂಜಾನಾಯ್ಕ, ಟಿ.ಹೆಚ್.ಎಂ.ಮಂಜುನಾಥ್, ಲಾಟಿ ನವರಂಗ, ಚಿಕ್ಕೇರಿ ಬಸಪ್ಪ, ಬಸಾಪುರದ ಮಂಜುನಾಥ, ಉದಯಶಂಕರ್, ತಿಮ್ಮನಾಯ್ಕ, ಪ್ರವೀಣ್, ಹುಲಿಕಟ್ಟಿ ಚಂದ್ರಪ್ಪ, ಮೈದೂರು ರಾಮಣ್ಣ, ಎನ್.ಮಜೀದ್, ಸಿದ್ದೀಕ್ ಇತರರು ಹಾಜರಿದ್ದರು.

# ಹರಪನಹಳ್ಳಿ ಛಲವಾದಿ ಸಭಾದ ಅಧ್ಯಕ್ಷರಾಗಿ ನಾಗರಾಜ್ ನಿಟ್ಟೂರು ಅವಿರೋಧ ಆಯ್ಕೆ



ಹರಪನಹಳ್ಳಿ, ಏ.4- ತಾಲ್ಲೂಕಿನ ಛಲವಾದಿ ಮಹಾಸಭಾದ ಅಧ್ಯಕ್ಷರಾಗಿ ನಾಗರಾಜ್ ನಿಟ್ಟೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಮಾಜದ ಮುಖಂಡರ ಸಮ್ಮುಖದಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಸಿದ್ದು, ಅಧ್ಯಕ್ಷರಾಗಿ ಬಾಗಳಿ ಬಸವರಾಜ್, ಉಪಾಧ್ಯಕ್ಷರಾಗಿ ಮೈದೂರು ಸಿ.ಕೊಟ್ರೇಶ್, ರಾಗಿಮಸಲವಾಡದ ಭೀಮಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಸಿ. ಪ್ರತಾಪ್, ಸಹ ಕಾರ್ಯದರ್ಶಿಗಳಾಗಿ ಬಾಗಳಿಯ ಪಿ.ಸಿ.ಕೊಟ್ರೇಶ್, ಅಲಮರಸೀಕರೆ ಪ್ರಭಾಕರ್, ಸಂಘಟನಾ ಕಾರ್ಯದರ್ಶಿಯಾಗಿ ಚಿಗಟೇರಿ ಶಿವಕುಮಾರ್ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

# ಜಿಲ್ಲೆಯಲ್ಲಿ 23 ಕೊರೊನಾ ಸೋಂಕಿತರು

ದಾವಣಗೆರೆ, ಏ. 4 - ಜಿಲ್ಲೆಯಲ್ಲಿ ಭಾನುವಾರ 23 ಕೊರೊನಾ ಸೋಂಕಿತರು ಪತ್ತೆಯಾಗಿದ್ದಾರೆ. ಇದರಿಂದಾಗಿ ಸಕ್ರಿಯ ಸೋಂಕಿತರ ಸಂಖ್ಯೆ 124ಕ್ಕೆ ತಲುಪಿದೆ.

ಇದೇ ದಿನ ನಾಲ್ವರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಭಾನುವಾರ ಕಂಡು ಬಂದ ಸೋಂಕಿತರಲ್ಲಿ 16 ಜನರು ದಾವಣಗೆರೆ, ಹರಿಹರದ ಇಬ್ಬರು, ಜಗಳೂರಿನ ಮೂವರು, ಚನ್ನಗಿರಿ ಹಾಗೂ ಹೊನ್ನಾಳಿಯ ತಲಾ ಒಬ್ಬರು ಸೇರಿದ್ದಾರೆ.

# ಬನಶಂಕರಿ ಬಡಾವಣೆಯಲ್ಲಿ ನೀರು ಪೋಲು



**ರೈತ ಮುಖಂಡರ ಆಕ್ಷೇಪ**

ದಾವಣಗೆರೆ, ಏ.4- ಬನಶಂಕರಿ ಬಡಾವಣೆ ವ್ಯಾಪ್ತಿಯಲ್ಲಿ ಭದ್ರಾ ನೀರು ಹರಿದು ಪೋಲಾ ಗುತ್ತಿರುವುದಕ್ಕೆ ರೈತ ಸಂಘವು ಆಕ್ಷೇಪಿಸಿದೆ.

ನಗರದ ಬನಶಂಕರಿ ಬಡಾವಣೆ ವ್ಯಾಪ್ತಿಯಲ್ಲಿ 20 ಎಕರೆ ಜಮೀನೆಲ್ಲಾ ಭೂ ಪರಿವರ್ತನೆ ಆಗಿ ನಗರ ಪ್ರದೇಶ ಆಗಿದೆ. ಈ ಪ್ರದೇಶಕ್ಕೆ ವಿನಾಕಾರಣ ಹೆಚ್ಚಿನ ನೀರನ್ನು ಹರಿಸುತ್ತಿದ್ದು, ಹರಿದು ಬಂದ ನೀರು ಖಾಲಿ ಜಾಗದಲ್ಲಿ ನಿಂತು ಪೋಲಾಗುತ್ತಿದೆ. ಈ ವಿಚಾರವನ್ನು ಸಂಬಂಧಪಟ್ಟ ಇಲಾಖೆ ಗಮನಿಸಿ ನೀರು ಉಳಿಸಲು ಮುಂದಾಗದಿರುವುದು ಶೋಚನೀಯ ಎಂದು ರೈತ ಮುಖಂಡರಾದ ಬಲ್ಲೂರ್ ರವಿಕುಮಾರ್, ಕುಮಾರಸ್ವಾಮಿ ಅಣಬೇರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಪ್ರದೇಶಕ್ಕೆ ಅವಶ್ಯ ಎಷ್ಟು ಪ್ರಮಾಣ ಇದೆಯೋ ಅಷ್ಟು ನೀರನ್ನು ಬಿಟ್ಟು ಉಳಿದ ನೀರನ್ನು ಅಚ್ಚುಕಟ್ಟು ಪ್ರದೇಶದ ಕೊನೆಯ ಭಾಗಕ್ಕೆ ಕೊಟ್ಟರೆ ರೈತರಿಗೆ ಅನುಕೂಲವಾಗಲಿದೆ. ಆದರೆ ಈ ಪ್ರಯತ್ನಕ್ಕೆ ಮುಂದಾಗುತ್ತಿಲ್ಲ. ಇಂತಹ ಸರಿ, ತಪ್ಪುಗಳನ್ನು ನೋಡಲು ಭೇಟಿ ನೀಡಲು ಸಮಯವಿಲ್ಲವೇ ಅಥವಾ ವಾಹನದ ಕೊರತೆಯೇ. ನೀರಿಗಾಗಿ ಪರಿತಪಿಸುತ್ತಿರುವಾಗ ಪೋಲಾಗುವುದನ್ನು ತಡೆಯಲು ಅಲಕ್ಷ್ಯ ಸರಿಯೇ ಎಂದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿದ್ದಾರೆ.

# ಜಿಲ್ಲಾ ಜೈನ್ ಕ್ರಿಕೆಟ್ ಪಂದ್ಯಾವಳಿ : ಜೈನ್ ದವನ್ ವಾರಿಯರ್ಸ್ ತಂಡ ಪ್ರಥಮ



ದಾವಣಗೆರೆ,ಏ.4- ಜಿಲ್ಲೆಯ ಜೈನ್ ಸಮಾಜ ಬಾಂಧವರಿಗಾಗಿ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಗರದ ಜೈನ್ ದವನ್ ವಾರಿಯರ್ಸ್ ತಂಡ ಪ್ರಥಮ ಸ್ಥಾನ ಗಳಿಸುವಲ್ಲಿ ಯಶಸ್ವಿಯಾಯಿತು.

ಸ್ಥಳೀಯ ಜೈನ್ ಸಂಸ್ಕಾರ ಇಲೆವೆನ್ ದ್ವಿತೀಯ ಸ್ಥಾನ ಪಡೆಯಿತು.

ನಗರದ ಜೈನ್ ಫ್ರೆಂಡ್ಸ್ ಗ್ರೂಪ್ ವತಿಯಿಂದ ಮೂರು ದಿನಗಳ ಕಾಲ ಜಿಲ್ಲಾ ಮಟ್ಟದ ಜೈನ್ ಕ್ರಿಕೆಟ್ ಪಂದ್ಯಾವಳಿಯನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ಜಿಲ್ಲೆಯ 12 ಜೈನ್ ತಂಡಗಳಿಂದ 180 ಕ್ರೀಡಾಪಟುಗಳು ಭಾಗವಹಿಸಿದ್ದರು.

ಜೈನ್ ದವನ್ ವಾರಿಯರ್ಸ್ ತಂಡದಲ್ಲಿ ನಾಯಕ ದಿನೇಶ್ ಜೈನ್, ಉಪ ನಾಯಕ ಸುನಿಲ್ ಜೈನ್, ಅಮಿತ್ ಜೈನ್, ಮುಖೇಶ್ ಜೈನ್, ಕುಮಾರಪಾಲ್ ಜೈನ್, ಸಂಜಯ್ ಜೈನ್, ಕಲ್ಪೇಶ್ ಜೈನ್, ದರ್ಶನ್ ಗಾಂಧಿ, ದರ್ಶನ್ ಕೊಠಾರೆ, ವಿಮಲ್ ಜೈನ್, ವಿಪಿನ್ ಜೈನ್, ಶ್ಯಾಂ ಜೈನ್, ರೇನಿಶ್ ಜೈನ್, ಪ್ರೀತೇಶ್ ಜೈನ್, ವಿಕಾಸ್ ಜೈನ್ ಅವರುಗಳಿದ್ದರು.

ಪ್ರಥಮ ಸ್ಥಾನ ಪಡೆದ ಜೈನ್ ದವನ್ ವಾರಿಯರ್ಸ್ ತಂಡಕ್ಕೆ ಪ್ರಾಯೋಜಕತ್ವ ವಹಿಸಿದ್ದ ದವನ್ - ನೂತನ್ ಅಲಿಯನ್ಸ್ ವತಿಯಿಂದ ದವನ್ ಕಾಲೇಜಿನ ಕಾರ್ಯದರ್ಶಿ ವೀರೇಶ್ ಪಟೇಲ್, ಜಂಟಿ ಕಾರ್ಯದರ್ಶಿ ಡಾ. ಜಿ.ಎಸ್. ಅಂಜು, ನಿರ್ದೇಶಕ ಹರ್ಷ ಗುಜ್ಜಾರ್ ಅಭಿನಂದಿಸಿದ್ದಾರೆ.

# ಬಿ.ಎಸ್ಸಿ ಪುರುಷರ ಸಾಂಪ್ರದಾಯಿಕ ಉಡುಗೆಗಳ ವಿಭಾಗ ಉದ್ಘಾಟನೆ



ದಾವಣಗೆರೆ, ಏ.4- ನಗರದ ಪಿ.ಜೆ. ಬಡಾವಣೆಯ ಬಿ.ಎಸ್.ಸಿ. ಮೇನ್ಸ್ ಶಾಖೆಯಲ್ಲಿ ಎಥ್ನಿಕ್ ವೇರ್, ಇಂಡೋವೆಸ್ಟರ್ನ್ ವೇರ್ ಮತ್ತು ಸೂಟ್ ಉಡುಗೆಗಳ ವಿಭಾಗವನ್ನು ಪ್ರಾರಂಭಿಸುತ್ತಿದ್ದೇವೆ. ಈ ಪ್ರಾರಂಭೋತ್ಸವವನ್ನು ಕಲರ್ಸ್ ಕನ್ನಡ ವಾಹಿನಿಯ 'ಕನ್ನಡತಿ' ಧಾರಾವಾಹಿಯ ನಟ ಕಿರಣ್‌ರಾಜ್ ಅವರು ಪ್ರಾರಂಭಿಸಿದರು.

ಮದುವೆ ಹಾಗೂ ಶುಭ ಸಮಾರಂಭಗಳಿಗೆ ಬೇಕಾಗುವ ಪುರುಷರ ಸೂಟ್ಸ್, ಶೇರ್‌ವಾನಿ ಇಂಡೋವೆಸ್ಟರ್ನ್, ಕುರ್ತಾ, ಬ್ಲೇಜರ್ ಹಾಗೂ ಧೋತಿ, ಶಲ್ಯ, ಪೇಟಾ, ವಿಭಿನ್ನ ಶೈಲಿಯ ಸಂಗ್ರಹವಾಗಿದೆ. ನಮ್ಮ ಭಾರತ ದೇಶವು ಅನೇಕ ವಿಭಿನ್ನ ಸಂಸ್ಕೃತಿಯ ತಾಣವಾಗಿದ್ದು, ಇದಕ್ಕೆ ಹೊಂದಿಕೊಳ್ಳುವ ರೀತಿಯಲ್ಲಿ ಅನೇಕ ಸಾಂಪ್ರದಾಯಿಕ ಉಡುಗೆಗಳು ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಆದ್ದರಿಂದ ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್‌ನ ಎಲ್ಲಾ ಶಾಖೆಗಳಲ್ಲಿ ಈ ಉಡುಗೆಗಳ ಸಂಗ್ರಹವನ್ನು ವಿಸ್ತರಿಸಿದ್ದೇವೆ ಎಂದು ತಿಳಿಸಲು ಹರ್ಷವಾಗುತ್ತದೆ ಎಂದು ಬಿಎಸ್‌ಸಿ ಪ್ರಕಟಣೆ ತಿಳಿಸಿದೆ.

ಈ ಸಂದರ್ಭದಲ್ಲಿ ಬಿ.ಎಸ್.ಚನ್ನಬಸಪ್ಪ ಅಂಡ್ ಸನ್ಸ್‌ನ ಮಾಲೀಕರು, ಗ್ರಾಹಕರು, ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ರೈಲ್ವೆ ಪ್ಲಾಟ್ ಫಾರಂ ನ ಮೊದಲ ಟಿಕೆಟ್ ಪಡೆದ ಸಂಸದ



ದಾವಣಗೆರೆ,ಏ.4- ನಗರದ ಅತ್ಯಾಧುನಿಕ ನವೀಕೃತ ರೈಲ್ವೆ ನಿಲ್ದಾಣದ ಉದ್ಘಾಟನಾ ಸಮಾರಂಭದ ಸಂದರ್ಭದಲ್ಲಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಮತ್ತು ಬಿಜೆಪಿ ಮುಖಂಡ ಎನ್.ಜಿ. ಪುಟ್ಟಸ್ವಾಮಿ ಅವರುಗಳು ಪ್ಲಾಟ್ ಫಾರಂ ನ ಮೊದಲ ಟಿಕೆಟ್ ಗಳನ್ನು ಪಡೆಯುವುದರ ಮೂಲಕ ನವೀಕೃತ ರೈಲ್ವೆ ನಿಲ್ದಾಣವನ್ನು ಪ್ರವೇಶಿಸಿದರು.

# ರಾಜ್ಯದಲ್ಲಿ 4,553 ಸೋಂಕಿತರು ಪತ್ತೆ

ಬೆಂಗಳೂರು, ಏ. 4 - ರಾಜ್ಯದಲ್ಲಿ ಭಾನುವಾರ 4,553 ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ ಹಾಗೂ ಇದೇ ದಿನ 15 ಜನ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

ಭಾನುವಾರದಂದು 2,060 ಜನರು ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲೀಗ 39,092 ಸಕ್ರಿಯ ಸೋಂಕಿತರಿದ್ದಾರೆ. ಇವರಲ್ಲಿ 331 ಜನರು ಐ.ಸಿ.ಯು.ನಲ್ಲಿದ್ದಾರೆ ಎಂದು ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬೆಂಗಳೂರು ನಗರ ಒಂದರಲ್ಲೇ 2,787 ಸೋಂಕಿತರು ಪತ್ತೆಯಾಗಿದ್ದಾರೆ ಮತ್ತು ಎಂಟು ಜನ ಸಾವನ್ನಪ್ಪಿದ್ದಾರೆ.

## ಲಸಿಕೆಗೆ ಕೊನೆ, ಲಾಕ್‌ಗೆ ಮೊದಲು

# ಮಕ್ಕಳ ಶಿಕ್ಷಣದ ಜೊತೆ ತಜ್ಞ ಜೀವಿಗಳ ಚೆಲ್ಲಾಟ

**ಲಸಿಕೆ ಹಾಕಿದರೂ ಕೊರೊನಾ ನಿವಾರಣೆಯಾಗದು ಎಂದು ಪರಿಣಿತರು ಹೇಳುತ್ತಿದ್ದಾರೆ. ಹೀಗಿರುವಾಗ ಕೊರೊನಾ ವೈರಸ್ ಇನ್ನಷ್ಟು ವರ್ಷ ಇರುವುದು ಖಾಯಂ. ಹೀಗಿರುವಾಗ ಶಾಲೆಗಳಿಗೆ ವರ್ಷಗಳ ಕಾಲ ಬೀಗ ಹಾಕಿದರೆ ಗತಿ ಏನು?**



14 ವರ್ಷದೊಳಗಿನ ಮಕ್ಕಳಿಗೆ ಕೊರೊನಾ ಪರಿಣಾಮ ಕಡಿಮೆ ಎಂದು ಸ್ವತಃ ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್ ಅವರು ಲೋಕಸಭೆಗೆ ತಿಳಿಸಿದ್ದಾರೆ. ವಿಪರ್ಯಾಸ ಎಂದರೆ ಕೊರೊನಾ ಹೆಚ್ಚಾಯಿತು ಎಂದು ಕರ್ನಾಟಕದಲ್ಲಿ 9ನೇ ತರಗತಿಯವರೆಗಿನ ಶಾಲೆಗಳನ್ನು ಬಂದ್ ಮಾಡಲಾಗಿದೆ!

ಕೇಂದ್ರದಲ್ಲೂ ಬಿಜೆಪಿ ಸರ್ಕಾರ ಇದೆ, ರಾಜ್ಯದಲ್ಲೂ ಬಿಜೆಪಿ ಸರ್ಕಾರ ಇದೆ. ಆದರೂ, ಕೇಂದ್ರದ ಆರೋಗ್ಯ ಸಚಿವರು ಆಡಿದ ಮಾತುಗಳು ರಾಜ್ಯಕ್ಕೆ ತಲುಪದೇ ಇರುವುದು ಆಶ್ಚರ್ಯಕರ.

2020ರಲ್ಲಿ ತಜ್ಞ ಜೀವಿಗಳು ನಡೆಸಿದ ಲಾಕ್‌ಡೌನ್ ವರ್ಣರಂಜಿತವಾಗಿತ್ತು. ಏಕೆಂದರೆ ಜಿಲ್ಲೆಗಳನ್ನು ಹಸಿರು, ಕೆಂಪು, ಹಳದಿ ಬಣ್ಣಗಳಲ್ಲಿ ವಿಂಗಡಿಸಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ವಿಧದ ಲಾಕ್‌ಡೌನ್ ಹೇರಲಾಗಿತ್ತು. ಇಷ್ಟಾದರೂ ಸೋಂಕು ತಾರಕಕ್ಕೇರುವುದು ತಪ್ಪಲಿಲ್ಲ.

2021ರಲ್ಲೂ ಕರ್ನಾಟಕದ ತಜ್ಞ ಜೀವಿಗಳು ಬಾರ್ ಮತ್ತು ಸಿನೆಮಾಗಳನ್ನು ದಾವಣಗೆರೆಯಂತಹ ಜಿಲ್ಲೆಗಳಲ್ಲಿ ಹೌಸ್‌ಫುಲ್ ಆಗಿರಲು ಬಿಟ್ಟು, 9ನೇ ತರಗತಿಯವರೆಗಿನ ಶಾಲೆಗಳನ್ನು ಬಂದ್ ಮಾಡಿದ್ದಾರೆ. ಇದು ತಜ್ಞ ಜೀವಿಗಳ ಸಾಮಾನ್ಯ ಜ್ಞಾನವನ್ನು ಪ್ರಶ್ನಿಸುವಂತೆ ಮಾಡುತ್ತಿದೆ.

ಕೇಂದ್ರ ಸರ್ಕಾರ ಲಸಿಕೆಗೆ ವಯೋಮಾನ ನಿಗದಿ ಪಡಿಸುತ್ತಾ ಬಂದಿದೆ. ಮೊದಲು 60 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಕೊಟ್ಟರೆ, ನಂತರ 45 ಮೀರಿದವರಿಗೆ ಕೊಡಲಾಗುತ್ತಿದೆ. ಅದರ ಅರ್ಥ, ವಯಸ್ಸು ಕಡಿಮೆ ಆದಷ್ಟೂ ಕೊರೊನಾ ಅಪಾಯ ಕಡಿಮೆ ಎಂದು. ಈ ವೇಗ ನೋಡಿದರೆ ಮಕ್ಕಳಿಗೆ ಲಸಿಕೆ ತಲುಪಲು ಇನ್ನೊಂದು ವರ್ಷವೇ ಬೇಕಾಗಬಹುದು. ಏಕೆಂದರೆ ಮಕ್ಕಳಿಗೆ ಅಪಾಯ ತೀರಾ ಕಡಿಮೆ ಎಂಬುದು ಕೇಂದ್ರ ಸರ್ಕಾರದ ನಿಲುವು.

ಆದರೆ, ರಾಜ್ಯ ಸರ್ಕಾರ ಮಕ್ಕಳನ್ನು ಮನೆಯಲ್ಲಿ ಉಳಿಸಿ, ಅಪಾಯ ಹೆಚ್ಚಾಗಿರುವ ದೊಡ್ಡವರನ್ನು ಮುಕ್ತವಾಗಿರಿಸಿದೆ. ಲಸಿಕೆ ವಿಷಯ ಬಂದಾಗ ಮಕ್ಕಳು ಕೊನೆ, ಲಾಕ್ ವಿಷಯ ಬಂದಾಗ ಮಕ್ಕಳು ಮೊದಲು ಎಂಬುದರ ತರ್ಕ ಏನು ಎಂಬುದನ್ನು ತಜ್ಞ ಜೀವಿಗಳೇ ಹೇಳಬೇಕಷ್ಟೇ.

**ನಷ್ಟ ಎಷ್ಟು? :** ಕಳೆದ ವರ್ಷ ಹೇರಲಾದ ಆರ್ಥಿಕ ಲಾಕ್‌ಡೌನ್ ಕಾರಣದಿಂದಾಗಿ ಭಾರತ ಸಾಕಷ್ಟು ನಷ್ಟ ಅನುಭವಿಸಿತು. ಅದರ ಹಾನಿ ಈಗ ಕಣ್ಣಿಗೆ ರಾಚುತ್ತಿದೆ. ಆದರೆ, ಶೈಕ್ಷಣಿಕ ಲಾಕ್‌ಡೌನ್ ಕಾರಣದಿಂದ ಆಗುವ ನಷ್ಟ ಇನ್ನೂ ಘೋರವಾಗಿರುತ್ತದೆ. ಆರ್ಥಿಕ ನಷ್ಟದಂತೆ ಶೈಕ್ಷಣಿಕ ನಷ್ಟ ತಕ್ಷಣಕ್ಕೆ ಕಣ್ಣಿಗೆ ಕಾಣುವುದಿಲ್ಲ. ಆದರೆ, ದಶಕದ ನಂತರ ದಾರಿ ತಪ್ಪಿದ ಒಂದು ಪೀಳಿಗೆಯೇ ಕಣ್ಣೆದುರಿಗೆ ನಿಂತಿರುತ್ತದೆ. ಒಂದು ದೇಶವನ್ನು ನಾಶ ಮಾಡಲು ಒಂದೇ ಪೀಳಿಗೆಯ ಶಿಕ್ಷಣ ನಾಶ ಮಾಡಿದರೆ ಸಾಕು. ಹೆಚ್ಚಿನ ವಿವರಗಳಿಗೆ ಮೆಕಾಲೆ ಶಿಕ್ಷಣ ಪದ್ಧತಿ ಹೇರಿದ ಬ್ರಿಟಿಷರನ್ನು ಸಂಪರ್ಕಿಸಬಹುದು.

**ಇನ್ನೆಷ್ಟು ದಿನ ಲಾಕ್ :** ಶಾಲೆಗೆ ಲಾಕ್ ಮಾಡುವುದು ಇನ್ನೆಷ್ಟು ದಿನ ಎಂಬುದೂ ಸ್ಪಷ್ಟವಾಗಿಲ್ಲ. ಕಳೆದ ವರ್ಷ ಚೀನಾ ಕೊರೊನಾ ವೈರಸ್ ಬಂದರೆ, ಈ ವರ್ಷ ಬ್ರೆಜಿಲ್, ದಕ್ಷಿಣ ಆಫ್ರಿಕಾ ಹಾಗೂ ಬ್ರಿಟನ್ ಕಡೆಯಿಂದ ಬಂದಿದೆ. ಮುಂದಿನ ವರ್ಷ ಇನ್ನೆಷ್ಟು ದೇಶಗಳಿಂದ ಬರುತ್ತದೋ ಗೊತ್ತಿಲ್ಲ. ಹಾಗೆಂದು ಬಾರ್ - ರೆಸ್ಟೋರೆಂಟ್, ಸಿನೆಮಾ ಮೋಜಿ ಮಸ್ತಿ ನಿಲ್ಲಿಸಬೇಕಿಲ್ಲ. ಶಾಲೆಗಳು ಮಾತ್ರ ಬಂದ್ ಆಗಿರಬೇಕು?!

ಲಸಿಕೆ ಹಾಕಿದರೂ ಕೊರೊನಾ ನಿವಾರಣೆಯಾಗದು ಎಂದು ಪರಿಣಿತರು ಹೇಳುತ್ತಿದ್ದಾರೆ. ಹೀಗಿರುವಾಗ ಕೊರೊನಾ ವೈರಸ್ ಇನ್ನಷ್ಟು ವರ್ಷ ಇರುವುದು ಖಾಯಂ. ಹೀಗಿರುವಾಗ ಶಾಲೆಗಳಿಗೆ ವರ್ಷಗಳ ಕಾಲ ಬೀಗ ಹಾಕಿದರೆ ಗತಿ ಏನು?

**ದುಡ್ಡಿದ್ದವರಿಗೆ ಶಿಕ್ಷಣ :** ಪರಿಸ್ಥಿತಿ ಹೀಗೇ ಮುಂದುವರೆದು ಶಾಲೆಗಳಿಗೆ ಬೀಗ ಹಾಕಿದರೆ ಉಳ್ಳವರು ಕಳೆದುಕೊಳ್ಳುವುದು ಕಡಿಮೆಯೇ. ಈಗಾಗಲೇ ಸಾಕಷ್ಟು ಜನರು ಮನೆಗಳಲ್ಲೇ ಪಾಠ ಕಲಿಕೆಗೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಶಾಲೆ ಬಂದ್ ಮಾಡಿದರೆ ಅಂಥವರಿಗೆ ಹೆಚ್ಚು ಕಷ್ಟವಾಗದು. ಆದರೆ, ಬಡವರ ಮಕ್ಕಳ ಗತಿ ಏನು? ಶೈಕ್ಷಣಿಕ ಅಸಮಾನತೆಯ ಉರುಳಿಗೆ ಬಡವರು - ಗ್ರಾಮೀಣರನ್ನು ದೂಡಿದರೆ ದೇಶದ ಗತಿ ಏನಾಗಬೇಕು?

**ಕಡ್ಡಾಯ ಬಂದ್ ಸರಿಯಲ್ಲ :** ಹತ್ತನೇ ತರಗತಿ ಮೇಲಿನ ಮಕ್ಕಳು ಶಾಲೆಗೆ ಬರಲು ಅವಕಾಶ ಕಲ್ಪಿಸಲಾಗಿದೆಯಾದರೂ, ಹಾಜರಿ ಕಡ್ಡಾಯ ಇಲ್ಲ. ಇದೇ ಸೌಲಭ್ಯವನ್ನು 9ನೇ ತರಗತಿಯವರೆಗಿನ ಮಕ್ಕಳಿಗೂ ಕೊಡಲು ಅವಕಾಶವಿದೆ. ಕೊರೊನಾಗೆ ಅಂಜುವವರು ಮಕ್ಕಳನ್ನು ಮನೆಯಲ್ಲಿ ಇಟ್ಟುಕೊಳ್ಳಲಿ. ಆದರೆ, ಕಲಿಕೆಗೆ ಬಯಕೆ ಇದ್ದರೂ ಅವರಿಗೆ ಬಲವಂತವಾಗಿ ಬಾಗಿಲು ಬಂದ್ ಮಾಡುವುದು ಏಕೆ?

ಆನ್‌ಲೈನ್ ಶಿಕ್ಷಣದ ಮೂಲಕ ನೇರ ಶಿಕ್ಷಣದ ಕೊರತೆ ನೀಗಿಸುತ್ತೇವೆ ಎಂಬುದು ಶತಮಾನದ ಜೋಕ್ ಅಷ್ಟೇ. ಹೀಗೆ ಇನ್ನಷ್ಟು ಕಾಲ ಬಿಟ್ಟರೆ ಮಕ್ಕಳು ಸಂಪೂರ್ಣ ದಾರಿ ತಪ್ಪುವ ಅಪಾಯ ಇದೆ. ನಂತರ ಬೀದಿಗೊಂದು ಸಿ.ಡಿ. ಲೇಡಿ - ಹೊಣೆಗೇಡಿ ರಾಜಕಾರಣಿಯಂತಹ ಬುದ್ಧಿ ಹೊಂದಿದವರು ಕಂಡು ಬಂದರೆ ಅಚ್ಚರಿ ಪಡಬೇಕಿಲ್ಲ.

- ಎಸ್.ಎ. ಶ್ರೀನಿವಾಸ್




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte